# ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ

ತವಂದಿ ಹಿರಿಯೂರು ತಾಲ್ಲೂಕು ಚಿತ್ರದುರ್ಗ ಜಿಲ್ಲೆ

*** ಡಿ.ಟಿ.ಪಿ. ಕಾರ್ಯ ***




ನಿಜಲಿಂಗಪ್ಪ ಹೆಚ್

ಸಹ ಶಿಕ್ಷಕರು

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ತವಂದಿ.

ಹಿರಿಯೂರ ತಾಲ್ಲೂಕು ಚಿತ್ರದುರ್ಗ ಜಿಲ್ಲೆ

7026654475




# ಮಾದರಿ ಪಾಠ ಯೋಜನೆ - 2020-21

ತರಗತಿ:ಐದು ವಿಷಯ: ಪರಿಸರ ಅಧ್ಯಯನ

ಘಟಕ: 1 ಘಟಕದ ಹೆಸರು: **ಜೀವ ಪ್ರಪಂಚ.** ದಿನಾಂಕ: ರಿಂದ ವರೆಗೆ

**ನಿರ್ಧಿಷ್ಟ ಉದ್ದೇಶಗಳು** : 1) ಜೀವಿಗಳ ಪ್ರಮುಖ ಲಕ್ಷಣಗಳನ್ನು ಗುರುತಿಸುವುದು. 2) ಸಸ್ಯದ ಜೀವನ ಚಕ್ರವನ್ನು ತಿಳಿಯುವುದು.
3) ಏಕವಾರ್ಷಿಕ, ದ್ವೈವಾರ್ಷಿಕ, ಬಹುವಾರ್ಷಿಕ, ಸಸ್ಯಗಳನ್ನು ವರ್ಗೀಕರಿಸುವುದು.

| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ – ತಂತ್ರಗಳು | ಶಿಕ್ಷಕರ ಸ್ವ-ಅವಲೋಕನ | ಅವಧಿ |
|---|---|---|---|---|---|
| **ತೊಡಗಿಸಿಕೊಳ್ಳುವಿಕೆ (Engage)** | ವಿದ್ಯಾರ್ಥಿಗಳ ಪೂರ್ವ ಜ್ಞಾನ ಪರೀಕ್ಷಿಸಲು ಚಿಕ್ಕ ಚಿಕ್ಕ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವುದು. 1) ನೀನು ನೋಡಿರುವ ಪ್ರಾಣಿಗಳನ್ನು ಹೆಸರಿಸಿ? 2) ನೀನು ನೋಡಿರುವ ಎರಡು ಸಸ್ಯಗಳನ್ನು ಹೆಸರಿಸು? | ಪ್ರಶ್ನಾವಳಿ ಕಾರ್ಡ್ | ತಂತ್ರ: ಪರೀಕ್ಷಣಾ<br>ಸಾಧನ: ಮೌಖಿಕ ಪರೀಕ್ಷೆ | ಸೂಕ್ತವಾಗಿ ಉತ್ತರಿಸುವರು | |
| **ಪತ್ತೆ ಹಚ್ಚುವಿಕೆ (Explore)** | ವಿದ್ಯಾರ್ಥಿಗಳಿಗೆ ಮಿಂಚುಪಟ್ಟಿಗಳನ್ನು ಕೊಟ್ಟು, ಅದರಲ್ಲಿರುವ ವಸ್ತುಗಳನ್ನು ಸಜೀವಿಗಳು ಹಾಗೂ ನಿರ್ಜೀವಿಗಳ ವಿಂಗಡಿಸಲು ತಿಳಿಸುವುದು. | ಮಿಂಚುಪಟ್ಟಿ | ತಂತ್ರ: ಚಟುವಟಿಕೆ<br>ಸಾಧನ: ಪಟ್ಟಿ ತಯಾರಿಕೆ | ಸಜೀವಿ & ನಿರ್ಜೀವಿ ಗಳನ್ನು ಗುರುತಿಸುವರು | |
| **ವಿವರಣೆ / ವ್ಯಕ್ತಪಡಿಸುವಿಕೆ (Explain / Express)** | - ಜೀವಿಗಳು ಜೀವಕೋಶಗಳಿಂದ ಆಗಿವೆ ಎಂದು ತಿಳಿಸಿ ಜೀವಿಗಳ ಉಸಿರಾಟ, ಆಹಾರಸೇವನೆಗಳನ್ನು ವಿವರಿಸುವುದು.<br>- ಸಸ್ಯಗಳ ಸೂರ್ಯನ ಶಾಖ, ಕಾರ್ಬನ್ ಡೈಆಕ್ಸೈಡ್, ನೀರು, ಖನಿಜಗಳನ್ನು ಬಳಸಿ, ಪತ್ರಹರಿತ್ತಿನ ಸಹಾಯದಿಂದ ಆಹಾರ ತಯಾರಿಸುವ ಕ್ರಿಯೆಯನ್ನು ವಿವರಿಸುವುದು.<br>- ಪ್ರಾಣಿಗಳ ಲಕ್ಷಣಗಳಾದ ಆಹಾರ ಸೇವನೆ, ಬೆಳವಣಿಗೆ, ಚಲನೆ ಇವುಗಳನ್ನು ವಿವರಿಸುವುದು.<br>- ಜೀವಿಗಳಲ್ಲಿ ನಡೆಯುವ ವಿಸರ್ಜನೆ, ಸಂತಾನೋತ್ಪತ್ತಿ, ಪ್ರಚೋದನೆಗೆ ತಕ್ಕ ಪ್ರತಿಕ್ರಿಯೆ, ಮುಂತಾದವುಗಳನ್ನು ವಿವರಿಸುವುದು.<br>- ಸಸ್ಯಗಳನ್ನು ಏಕವಾರ್ಷಿಕ, ದ್ವೈವಾರ್ಷಿಕ, ಬಹುವಾರ್ಷಿಕ, ಸಸ್ಯಗಳನ್ನಾಗಿ ವಿಂಗಡಿಸುವುದು. | ಆಹಾರದ ಚಿತ್ರ<br><br>ಸಸ್ಯದ ಚಿತ್ರ<br><br>ಪ್ರಾಣಿಯ ಚಿತ್ರ<br><br>ಮುಟ್ಟಿದರೆ ಮುನಿ ಸಸ್ಯ ನಾಯಿ ಹಾಗೂ ಮರಿಗಳ ಚಿತ್ರ | ತಂತ್ರ: ಚಟುವಟಿಕೆ<br>ಸಾಧನ: ಸಸ್ಯದ ಚಿತ್ರ ರಚನೆ, ವಿವಿಧ ಪ್ರಾಣಿಗಳ ಆಹಾರ ಪಟ್ಟಿ ಮಾಡುವುದು,<br>ಗುಂಪು ಕಾರ್ಯ | ಚಿತ್ರ ರಚಿಸುವ ಕೌಶಲ್ಯ ಹೊಂದಿರುವರು<br><br>ಗೃಹಪಾಠ ನಿರ್ವಹಿಸುವರು<br><br>ಗುಂಪಿನಲ್ಲಿ ಸಹಕಾರವಿತ್ತು | |
| **ವಿಷಯದ ವಿಸ್ತರಣೆ (Expand)** | ಸಮೀಪದ ಹೊಲಕ್ಕೆ ಭೇಟಿ ನೀಡಿ ಅಲ್ಲಿರುವ ಏಕವಾರ್ಷಿಕ ದ್ವೈವಾರ್ಷಿಕ ಬಹುವಾರ್ಷಿಕ ಸಸ್ಯಗಳನ್ನು ಗುಂಪುಗಳಲ್ಲಿ ಗುರುತಿಸಿ ಸಂಗ್ರಹಿಸುವುದು | ಸಂದರ್ಶನ | ತಂತ್ರ: ಚಟುವಟಿಕೆ<br>ಸಾಧನ: ಮಾಹಿತಿ ಸಂಗ್ರಹಣೆ | ಸಸ್ಯಗಳನ್ನು ಸಂಗ್ರಹಿಸುವರು | |
| **ಮೌಲ್ಯಮಾಪನ (Evaluation)** | ವಿದ್ಯಾರ್ಥಿಗಳ ಕಲಿಕೆಯನ್ನು ಪರೀಕ್ಷಿಸಲು ರಸಪ್ರಶ್ನೆ ಕಾರ್ಯಕ್ರಮ ಮಾಡುವುದು | ಪ್ರಶ್ನಾವಳಿ ಕಾರ್ಡ್ | ತಂತ್ರ: ಪರೀಕ್ಷಣ ಸಾಧನ: ರಸಪ್ರಶ್ನೆ | ಎಲ್ಲಾ ಪ್ರಶ್ನೆಗಳಿಗೆ ಸೂಕ್ತ ಉತ್ತರ ನೀಡುವರು | |

ಶಿಕ್ಷಕರ ಸಹಿ ಮುಖ್ಯ ಶಿಕ್ಷಕರ ಸಹಿ

ಘಟಕ: 2 ಘಟಕದ ಹೆಸರು: **ಕುಟುಂಬ.** ದಿನಾಂಕ: ರಿಂದ ವರೆಗೆ

**ನಿರ್ದಿಷ್ಟ ಉದ್ದೇಶಗಳು** : 1) ಕುಟುಂಬದ ಮಹತ್ವವನ್ನು ಅರಿಯುವುದು. 2) ಕುಟುಂಬದ ವಂಶವೃಕ್ಷ ರಚಿಸುವುದು. 3) ವಿಭಕ್ತ ಮತ್ತು ಅವಿಭಕ್ತ ಕುಟುಂಬಗಳ ಲಕ್ಷಣಗಳನ್ನು ತಿಳಿಯುವುದು.

| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ – ತಂತ್ರಗಳು | ಶಿಕ್ಷಕರ ಸ್ವ-ಅವಲೋಕನ | ಅವಧಿ |
|---|---|---|---|---|---|
| **ತೊಡಗಿಸಿಕೊಳ್ಳುವಿಕೆ (Engage)** | ಕುಟುಂಬ ಜೀವನವನ್ನು ವರ್ಣಿಸುವ ಹಾಡುಗಳು 'ನಮ್ಮ ಸಂಸಾರ ಆನಂದ ಸಾಗರ' 'ನಮ್ಮ ಮನೆಯಲ್ಲಿ ದಿನವೂ ಚೈತ್ರವೇ' ಹಾಡುಗಳನ್ನು ಕೇಳಿಸುವುದು | ಹಾಡುಗಳು | ತಂತ್ರ: ಸಂಗೀತ<br>ಸಾಧನ: ಹಾಡುಗಳು | ರಾಗಬದ್ಧವಾಗಿ ಹಾಡುವರು | |
| **ಪತ್ತೆ ಹಚ್ಚುವಿಕೆ (Explore)** | ವಿದ್ಯಾರ್ಥಿಗಳಿಗೆ ಅವರ ಕುಟುಂಬದ ಸದಸ್ಯರು ಹೆಸರುಗಳನ್ನು ಪಟ್ಟಿ ಮಾಡಲು ತಿಳಿಸುವುದು | ಕುಟುಂಬದ ಚಿತ್ರ | ತಂತ್ರ: ಚಟುವಟಿಕೆ<br>ಸಾಧನ: ಪಟ್ಟಿ ಮಾಡುವುದು | ಚಟುವಟಿಕೆಯಲ್ಲಿ ಆಸಕ್ತಿಯಿಂದ ಭಾಗವಹಿಸುವರು | |
| **ವಿವರಣೆ / ವ್ಯಕ್ತಪಡಿಸುವಿಕೆ (Explain / Express)** | - ಸೂಕ್ತ ಸಂಕೇತಗಳ ಮೂಲಕ ಕುಟುಂಬದ ವಂಶವೃಕ್ಷವನ್ನು ರಚಿಸಿ ವಿವರಿಸುವುದು.<br>- ವಿವಿಧ ವಿದ್ಯಾರ್ಥಿಗಳ ಮನೆಯ ಸದಸ್ಯರುಗಳ ಹೆಸರು ಹಾಗೂ ಸಂಖ್ಯೆಗಳನ್ನು ತಿಳಿದು ವಿಭಕ್ತ ಮತ್ತು ಅವಿಭಕ್ತ ಕುಟುಂಬಗಳು ಲಕ್ಷಣಗಳನ್ನು ತಿಳಿಸುವುದು.<br>- ಕುಟುಂಬದ ಮಹತ್ವ ಕುಟುಂಬದ ವಿವಿಧ ಸದಸ್ಯರುಗಳಿಂದ ನಮಗೆ ಉಂಟಾಗುವ ಸಹಾಯಗಳನ್ನು ಗುರುತಿಸುವುದು | ಸಂಕೇತಗಳ ಚಾರ್ಟ್ ಕೋಷ್ಟಕ | ತಂತ್ರ: ಚಟುವಟಿಕೆ<br>ಸಾಧನ: ಕೋಷ್ಟಕ ತಯಾರಿಕೆ | ಕುಟುಂಬದ ವಿವಿಧ ಸದಸ್ಯರುಗಳನ್ನು ಗುರುತಿಸುವರು | |
| **ವಿಷಯದ ವಿಸ್ತರಣೆ (Expand)** | ವಿದ್ಯಾರ್ಥಿಗಳನ್ನು ಗುಂಪುಗಳನ್ನಾಗಿ ಮಾಡಿ, 5-6 ಮನೆಗಳಿಗೆ ಭೇಟಿ ನೀಡಿ, ಅಲ್ಲಿರುವ ಕುಟುಂಬ ಸದಸ್ಯರ ಸಂಖ್ಯೆ, ಹೆಸರುಗಳನ್ನು ಪಟ್ಟಿ ಮಾಡಲು ತಿಳಿಸುವುದು. | ಚಟುವಟಿಕೆ | ತಂತ್ರ: ಸಂದರ್ಶನ<br>ಸಾಧನ: ಸಂದರ್ಶನ ಸೂಚಿ | ಮಾಹಿತಿ ಸಂಗ್ರಹಿಸುವರು | |
| **ಮೌಲ್ಯಮಾಪನ (Evaluation)** | ಚಿಕ್ಕ ಚಿಕ್ಕ ಪ್ರಶ್ನೆಗಳು ಮೂಲಕ ಕಲಿಕೆಯನ್ನು ಪರೀಕ್ಷಿಸುವುದು.<br>1) ನಿನ್ನ ಕುಟುಂಬದ ಸದಸ್ಯರು ಎಷ್ಟು?<br>2) ನಿಮ್ಮ ಕುಟುಂಬದ ಯಜಮಾನ ಯಾರು? | ಪ್ರಶ್ನಾವಳಿ ಕಾರ್ಡ್ | ತಂತ್ರ: ಪರೀಕ್ಷಣ<br>ಸಾಧನ: ಮೌಖಿಕ ಪರೀಕ್ಷೆ | ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಲು ಪ್ರಯತ್ನಿಸುವರು | |

ಶಿಕ್ಷಕರ ಸಹಿ ಮುಖ್ಯ ಶಿಕ್ಷಕರ ಸಹಿ

ಘಟಕ: 3 ಘಟಕದ ಹೆಸರು: **ಸಮುದಾಯ.** ದಿನಾಂಕ: ರಿಂದ ವರೆಗೆ

**ನಿರ್ಧಿಷ್ಟ ಉದ್ದೇಶಗಳು** : 1) ಸಮುದಾಯದ ಲಕ್ಷಣಗಳು ಮತ್ತು ವಿಧಗಳನ್ನು ಗುರುತಿಸುವುದು. 2) ಗ್ರಾಮೀಣ ಹಾಗೂ ನಗರ ಸಮುದಾಯಗಳನ್ನು ತಿಳಿಯುವುದು. 3) ವಿವಿಧ ಅಗತ್ಯತೆ ಮತ್ತು ಮೌಲ್ಯಗಳನ್ನು ತಿಳಿಯುವುದು.

| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ – ತಂತ್ರಗಳು | ಶಿಕ್ಷಕರ ಸ್ವ-ಅವಲೋಕನ | ಅವಧಿ |
|---|---|---|---|---|---|
| **ತೊಡಗಿಸಿಕೊಳ್ಳುವಿಕೆ (Engage)** | ಚಿಕ್ಕಚಿಕ್ಕ ಪ್ರಶ್ನೆಗಳ ಮೂಲಕ ವಿದ್ಯಾರ್ಥಿಗಳ ಪೂರ್ವ ಜ್ಞಾನವನ್ನು ಪರೀಕ್ಷಿಸುವುದು. 1) ನಿಮ್ಮ ಕುಟುಂಬದಲ್ಲಿ ಯಾರು ಯಾರು ಇರುವರು? 2) ನಿಮ್ಮ ನೆರೆಹೊರೆಯಲ್ಲಿ ವಾಸಿಸುತ್ತಿರುವವರನ್ನು ಹೆಸರಿಸಿ? | ಪ್ರಶ್ನಾವಳಿ ಕಾರ್ಡು | ತಂತ್ರ: ಪರೀಕ್ಷಣ<br>ಸಾಧನ: ಮೌಖಿಕ ಪ್ರಶ್ನೆಗಳು | ಪ್ರಶ್ನೆಗಳಿಗೆ ಸರಿಯಾಗಿ ಉತ್ತರ ನೀಡುವರು | |
| **ಪತ್ತೆ ಹಚ್ಚುವಿಕೆ (Explore)** | ವಿದ್ಯಾರ್ಥಿಗಳಿಗೆ ತನ್ನ ಸುತ್ತಮುತ್ತಲೂ ಕಂಡುಬರುವ ವಿವಿಧ ರೀತಿಯ ಕಸುಬುಗಳನ್ನು ಪಟ್ಟಿ ಮಾಡಲು ತಿಳಿಸುವುದು | ಚಟುವಟಿಕೆ | ತಂತ್ರ: ಚಟುವಟಿಕೆ<br>ಸಾಧನ: ಪಟ್ಟಿ ತಯಾರಿ | ವಿವಿಧ ಕಸುಬುಗಳನ್ನು ತಿಳಿದಿರುವರು. | |
| **ವಿವರಣೆ / ವ್ಯಕ್ತಪಡಿಸುವಿಕೆ (Explain / Express)** | - ಗ್ರಾಮೀಣ ಸಂವಿಧಾನವನ್ನು ವಿವರಿಸುವುದು. ಕೃಷಿ, ಕಮ್ಮಾರಿಕೆ, ಪಶು ಸಾಕಣೆ, ನೇಕಾರ, ಬುಟ್ಟಿ ಹೆಣೆಯುವಿಕೆ, ಮುಂತಾದ ಕಸುಬುಗಳನ್ನು ಚಿತ್ರಗಳ ಮೂಲಕ ವಿವರಿಸುವುದು.<br>- ನಗರ ಸಮುದಾಯದ ಶಿಕ್ಷಣ, ಕಟ್ಟಡ ನಿರ್ಮಾಣ, ಕೈಗಾರಿಕೆಗಳು, ಸಂಚಾರ ದಟ್ಟಣೆ, ಕೊಳಚೆ ಪ್ರದೇಶಗಳ ಸಮಸ್ಯೆ, ಮುಂತಾದವುಗಳನ್ನು ವಿವರಿಸುವುದು.<br>- ಕಾಡಿನಲ್ಲಿ ವಾಸಿಸುವ ಬುಡಕಟ್ಟು ಸಮುದಾಯಗಳ ಆಚರಣೆ, ವಸತಿ, ಉಡುಪು, ವಿಶಿಷ್ಟ ಪದ್ಧತಿಗಳನ್ನು ವಿವರಿಸುವುದು. | ನೇಕಾರಿಕೆ<br>ಬಡಗಿ<br>ಕಾರ್ಖಾನೆಯ ಚಿತ್ರ<br>ಕಾಲೇಜಿನ ಚಿತ್ರ<br>ಬುಡಕಟ್ಟು ಆಚರಣೆಯ ಚಿತ್ರಗಳು | ತಂತ್ರ ಚಟುವಟಿಕೆ<br>ಸಾಧನ ಗುಂಪು ಚಟುವಟಿಕೆ<br><br>ತಂತ್ರ: ಚಟುವಟಿಕೆ<br>ಸಾಧನ: ಬುಡಕಟ್ಟು ಆಚರಣೆಯ ಚಿತ್ರಗಳು | ಸರ್ಕಾರದ ಕಾರ್ಯಕ್ರಮಗಳನ್ನು ತಿಳಿದಿರುವರು | |
| **ವಿಷಯದ ವಿಸ್ತರಣೆ (Expand)** | ನಿಮ್ಮ ಪ್ರದೇಶದಲ್ಲಿ ಇರುವ ನೇಕಾರ, ಕಮ್ಮಾರ, ಬಡಗಿ, ಮುಂತಾದ ಕಸುಬು ಮಾಡುವವರನ್ನು ಭೇಟಿ ಮಾಡಿ ಸಂದರ್ಶಿಸುವುದು ಹಾಗೂ ಅವರ ಕಾರ್ಯ ಮತ್ತು ಸಮಸ್ಯೆಗಳನ್ನು ತಿಳಿಯುವುದು. | ಸಂದರ್ಶನ ಸೂಚಿ | ತಂತ್ರ: ಸಂದರ್ಶನ<br>ಸಾಧನ: ಮಾಹಿತಿ ಸಂಗ್ರಹ | ಸೂಕ್ತವಾಗಿ ಮಾಹಿತಿ ಸಂಗ್ರಹಿಸುವರು. | |
| **ಮೌಲ್ಯಮಾಪನ (Evaluation)** | ಗ್ರಾಮದ ವಿವಿಧ ಕಸುಬುಗಳನ್ನು ಕಾರ್ಯವಿಧಾನವನ್ನು ತಿಳಿಯುವುದು. | ವಿವಿಧ ಕಸುಬುಗಳ ಚಿತ್ರಗಳು | ತಂತ್ರ: ಚಟುವಟಿಕೆ<br>ಸಾಧನ: ಯೋಜನೆ | ಯೋಜನೆಯನ್ನು ತಯಾರಿಸುವರು. | |

ಶಿಕ್ಷಕರ ಸಹಿ ಮುಖ್ಯ ಶಿಕ್ಷಕರ ಸಹಿ

ಘಟಕ: 4 ಘಟಕದ ಹೆಸರು: **ಸಮುದಾಯ ಕ್ರೀಡೆಗಳು.** ದಿನಾಂಕ: ರಿಂದ ವರೆಗೆ

**ನಿರ್ಧಿಷ್ಟ ಉದ್ದೇಶಗಳು** : 1) ಕ್ರೀಡೆಗಳು ಮತ್ತು ವ್ಯಾಯಾಮಗಳ ಪ್ರಾಮುಖ್ಯತೆಯನ್ನು ಅರಿಯುವುದು. 2) ಸಾಹಸ ಕ್ರೀಡೆಗಳ ಪರಿಚಯ ಮಾಡಿಕೊಳ್ಳುವುದು.

| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ – ತಂತ್ರಗಳು | ಶಿಕ್ಷಕರ ಸ್ವ-ಅವಲೋಕನ | ಅವಧಿ |
|---|---|---|---|---|---|
| **ತೊಡಗಿಸಿಕೊಳ್ಳುವಿಕೆ (Engage)** | ವಿದ್ಯಾರ್ಥಿಗಳನ್ನು ವೃತ್ತಾಕಾರವಾಗಿ ನಿಲ್ಲಿಸಿ 'ಹುಲಿ ಮತ್ತು ಹಸು' ಆಟವನ್ನು ಆಡಿಸುವುದು. | ಆಟ | ತಂತ್ರ: ಚಟುವಟಿಕೆ<br>ಸಾಧನ: ಆಟಗಳು | ಆಟ ಆಡುವಲ್ಲಿ ಆಸಕ್ತಿ ಇದೆ. | |
| **ಪತ್ತೆ ಹಚ್ಚುವಿಕೆ (Explore)** | ಚಿಕ್ಕಚಿಕ್ಕ ಪ್ರಶ್ನೆಗಳ ಮೂಲಕ ವಿದ್ಯಾರ್ಥಿಗಳ ಜ್ಞಾನವನ್ನು ಪರೀಕ್ಷಿಸುವುದು. 1) ನಿನಗೆ ಯಾವ ಆಟ ಇಷ್ಟ?<br>2) ನಿನಗೆ ಗೊತ್ತಿರುವ ಆಟಗಳನ್ನು ಹೆಸರಿಸಿ? | ಪ್ರಶ್ನಾವಳಿ ಕಾರ್ಡ್ | ತಂತ್ರ: ಪರೀಕ್ಷಣ<br>ಸಾಧನ ಮೌಖಿಕ ಪರೀಕ್ಷೆ | ವಿವಿಧ ಆಟಗಳನ್ನು ತಿಳಿದಿರುವರು. | |
| **ವಿವರಣೆ / ವ್ಯಕ್ತಪಡಿಸುವಿಕೆ (Explain / Express)** | - ಆಟಗಳು ಹಾಗೂ ಯೋಗ, ವ್ಯಾಯಾಮಗಳಿಂದ ನಮ್ಮ ದೇಹ ಹಾಗೂ ಮನಸ್ಸುಗಳಿಗೆ ಆಗುವ ಪ್ರಯೋಜನಗಳನ್ನು ತಿಳಿಸುವುದು.<br>- ಅಂತರಾಷ್ಟ್ರೀಯ ಕ್ರೀಡೆಗಳಾದ ಕ್ರಿಕೆಟ್, ಫುಟ್ಬಾಲ್, ಟೆನ್ನಿಸ್, ಹಾಕಿ, ಬ್ಯಾಡ್ಮಿಂಟನ್, ಮುಂತಾದ ಕ್ರೀಡೆಗಳಲ್ಲಿ ಹಾಗೂ ಆ ಕ್ರೀಡೆಗಳ ಭಾರತೀಯ ಆಟಗಾರರ ಬಗ್ಗೆ ತಿಳಿಯುವುದು ಮತ್ತು ಆಟಗಾರರ ಚಿತ್ರಗಳನ್ನು ಸಂಗ್ರಹಿಸಲು ತಿಳಿಸುವುದು.<br>- ಭಾರತದ ಸಾಹಸ ಗ್ರಾಮೀಣ ಕ್ರೀಡೆಗಳಾದ ಕುಸ್ತಿ, ಕಬ್ಬಡ್ಡಿ, ಮಲ್ಲಕಂಬ, ಭಾರ ಎತ್ತುವುದು, ಮುಂತಾದ ಕ್ರೀಡೆಗಳನ್ನು ಉದಾಹರಣೆಯ ಮೂಲಕ ತಿಳಿಸುವುದು. | ಯೋಗದ ಚಿತ್ರ<br>ಕ್ರಿಕೆಟ್, ಕಬ್ಬಡ್ಡಿ, ಫುಟ್ಬಾಲ್ ಆಟಗಳ ಚಿತ್ರ | ತಂತ್ರ: ಚಟುವಟಿಕೆ<br>ಸಾಧನ: ವ್ಯಾಯಾಮ<br>ತಂತ್ರ: ಚಟುವಟಿಕೆ<br>ಸಾಧನ: ಚಿತ್ರ ಸಂಗ್ರಹ<br>ತಂತ್ರ: ಚಟುವಟಿಕೆ<br>ಸಾಧನ: ಗ್ರಾಮೀಣ ಆಟ ಆಡುವುದು. | ಸೂಕ್ತ ಭಂಗಿಗಳಲ್ಲಿ ವ್ಯಾಯಾಮ ಮಾಡುವವರು<br>ಉತ್ತಮವಾಗಿ ಚಿತ್ರಗಳನ್ನು ಸಂಗ್ರಹಿಸುವರು<br>ಆಟದ ನಿಯಮಗಳನ್ನು ತಿಳಿದಿರುವರು ಕೇರಂ | |
| **ವಿಷಯದ ವಿಸ್ತರಣೆ (Expand)** | ವಿದ್ಯಾರ್ಥಿಗಳನ್ನು ಗುಂಪುಗಳನ್ನಾಗಿ ಮಾಡಿ ಒಳಾಂಗಣ ಆಟಗಳ ಆದ ಕೇರಂ ಚೆಸ್ ಚೌಕಾಬಾರ ಗಳನ್ನು ಮಾಡುವ ವಿಧಾನಗಳನ್ನು ತಿಳಿಯುವುದು. | ಚೆಸ್ ಬೋರ್ಡ್<br>ಕೇರಮ್ ಬೋರ್ಡ್ | ತಂತ್ರ: ಚಟುವಟಿಕೆ<br>ಸಾಧನ: ಬರವಣಿಗೆ | ಆಡುವ ವಿಧಾನವನ್ನು ತಿಳಿದಿರುವರು | |
| **ಮೌಲ್ಯಮಾಪನ (Evaluation)** | ಪ್ರಶ್ನೆಗಳ ಮೂಲಕ ಕಲಿತ ವಿಷಯಗಳ ಕಲಿಕೆಯನ್ನು ಪರೀಕ್ಷಿಸುವುದು | ಪಠ್ಯಪುಸ್ತಕ<br>ಅಭ್ಯಾಸ ಪುಸ್ತಕ | ತಂತ್ರ; ಚಟುವಟಿಕೆ<br>ಸಾಧನ: ಪಟ್ಟಿ ಮಾಡುವುದು | ಆಸಕ್ತಿಯಿಂದ ಭಾಗವಹಿಸಿ ಪಟ್ಟಿ ಮಾಡುವರು | |

ಶಿಕ್ಷಕರ ಸಹಿ ಮುಖ್ಯ ಶಿಕ್ಷಕರ ಸಹಿ

ಘಟಕ: 5 ಘಟಕದ ಹೆಸರು: **ನೈಸರ್ಗಿಕ ಸಂಪನ್ಮೂಲಗಳು.** ದಿನಾಂಕ: ರಿಂದ ವರೆಗೆ

**ನಿರ್ಧಿಷ್ಟ ಉದ್ದೇಶಗಳು** : 1) ನೈಸರ್ಗಿಕ ಸಂಪನ್ಮೂಲಗಳನ್ನು ಗುರುತಿಸುವುದು. 2) ನವೀಕರಿಸಬಹುದಾದ ಮತ್ತು ನವೀಕರಿಸಲಾಗದ ಸಂಪನ್ಮೂಲಗಳ ಬಗ್ಗೆ ತಿಳಿಯುವುದು.
3) ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ ಮಿತ ಬಳಕೆಯ ಬಗ್ಗೆ ತಿಳಿಯುವುದು.

| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ – ತಂತ್ರಗಳು | ಶಿಕ್ಷಕರ ಸ್ವ-ಅವಲೋಕನ | ಅವಧಿ |
|---|---|---|---|---|---|
| **ತೊಡಗಿಸಿಕೊಳ್ಳುವಿಕೆ (Engage)** | ಪ್ರಕೃತಿಯಲ್ಲಿ ದೊರೆಯುವ ನಮಗೆ ಅತಿ ಅಗತ್ಯವಾದ ವಸ್ತುಗಳನ್ನು ಚರ್ಚೆಯ ಮೂಲಕ ತಿಳಿಯುವುದು. | ಕಪ್ಪು ಹಲಗೆ | ತಂತ್ರ: ಚಟುವಟಿಕೆ<br>ಸಾಧನ: ಪಟ್ಟಿ ಮಾಡುವುದು | ಅಗತ್ಯವಸ್ತುಗಳನ್ನು ಗುರುತಿಸುವರು | |
| **ಪತ್ತೆ ಹಚ್ಚುವಿಕೆ (Explore)** | ವಿದ್ಯಾರ್ಥಿಗಳು ಗುಂಪಿನಲ್ಲಿ ಚರ್ಚಿಸಿ ಭೂಮಿಯ ಮೇಲೆ ಸಿಗುವ ವಿವಿಧ ರೀತಿಯ ಸಂಪನ್ಮೂಲಗಳನ್ನು ಹೆಸರಿಸುವುದು | ಭೂಮಿಯ ಚಿತ್ರ | ತಂತ್ರ: ಚಟುವಟಿಕೆ<br>ಸಾಧನ: ಗುಂಪು ಚರ್ಚೆ | ಭೂಮಿಯ ಮಹತ್ವ ತಿಳಿಯುವರು | |
| **ವಿವರಣೆ / ವ್ಯಕ್ತಪಡಿಸುವಿಕೆ (Explain / Express)** | - ಭೂಮಿಯ ಮೇಲೆ ದೊರೆಯಬಹುದಾದ ಸಂಪನ್ಮೂಲಗಳನ್ನು ಗುರುತಿಸಿ ಹೆಸರಿಸುವುದು ಮತ್ತು ಅದರಲ್ಲಿ ನವೀಕರಿಸಬಹುದಾದ ಮತ್ತು ನವೀಕರಿಸಲಾಗದ ಸಂಪನ್ಮೂಲಗಳನ್ನು ತಿಳಿಸುವುದು<br>- ಸೌರಶಕ್ತಿ, ಮಣ್ಣುಗಳ ಮಹತ್ವ, ಅವುಗಳಿಂದ ನಮಗಾಗುವ ಪ್ರಯೋಜನಗಳು ಹಾಗೂ ಅವುಗಳ ಸಂರಕ್ಷಣೆಯ ಬಗ್ಗೆ ತಿಳಿಸುವುದು.<br>- ಅರಣ್ಯ, ಇಂಧನಗಳನ್ನು ಹೆಸರಿಸಿ ಅವುಗಳಿಂದ ಆಗುವ ಉಪಯೋಗಗಳನ್ನು ವಿವರಿಸುವುದು. | ಸೂರ್ಯ<br>ನೀರು<br>ಕಾಡು<br>ಸೂರ್ಯನ ಚಿತ್ರ<br>ಅರಣ್ಯದ ಚಿತ್ರ | ತಂತ್ರ: ಚಟುವಟಿಕೆ<br>ಸಾಧನ: ವರ್ಗೀಕರಣ<br><br>ತಂತ್ರ: ಚಟುವಟಿಕೆ<br>ಸಾಧನ:<br>ಪಟ್ಟಿಮಾಡುವುದು | ನವೀಕರಿಸಬಹುದಾದ & ನವೀಕರಿಸಲಾಗದ ಸಂಪನ್ಮೂಲಗಳನ್ನು ತಿಳಿಯುವರು<br><br>ಇಂಧನಗಳನ್ನು ಗುರುತಿಸುವರು | |
| **ವಿಷಯದ ವಿಸ್ತರಣೆ (Expand)** | ವಿದ್ಯಾರ್ಥಿಗಳಿಗೆ ಗುಂಪಿನಲ್ಲಿ ಚರ್ಚಿಸಿ, ವಿವಿಧ ಸಂಪನ್ಮೂಲಗಳಿಂದ ನಮಗಾಗುವ ಉಪಯೋಗಗಳನ್ನು ತಿಳಿಯುವುದು. | ಕಪ್ಪು ಹಲಗೆ | ತಂತ್ರ: ಚಟುವಟಿಕೆ<br>ಸಾಧನ: ಕೋಷ್ಟಕ ತಯಾರಿಕೆ | ಆಸಕ್ತಿಯಿಂದ ಕೋಷ್ಟಕವನ್ನು ತಯಾರಿಸುವರು | |
| **ಮೌಲ್ಯಮಾಪನ (Evaluation)** | ಚಿಕ್ಕ ಪ್ರಶ್ನೆಗಳ ಮೂಲಕ ವಿದ್ಯಾರ್ಥಿಗಳ ಕಲಿಕೆಯನ್ನು ಪರೀಕ್ಷಿಸುವುದು.<br>1) ನೈಸರ್ಗಿಕ ಸಂಪನ್ಮೂಲಗಳು ಯಾವುವು?<br>2) ಇಂಧನ ಗಳನ್ನು ಹೆಸರಿಸಿ? | ಪ್ರಶ್ನಾವಳಿ ಕಾರ್ಡ್ | ತಂತ್ರ: ಚಟುವಟಿಕೆ<br>ಸಾಧನ: ಮೌಖಿಕ ಪರೀಕ್ಷೆ | ಎಲ್ಲಾ ಪ್ರಶ್ನೆಗಳಿಗೆ ಸೂಕ್ತ ಉತ್ತರ ನೀಡುವರು | |

ಶಿಕ್ಷಕರ ಸಹಿ ಮುಖ್ಯ ಶಿಕ್ಷಕರ ಸಹಿ

ಘಟಕ: 6 ಘಟಕದ ಹೆಸರು: **ವಾಯು.** ದಿನಾಂಕ: ರಿಂದ ವರೆಗೆ

**ನಿರ್ಧಿಷ್ಟ ಉದ್ದೇಶಗಳು** : 1) ವಾಯುವಿನ ಘಟಕಗಳನ್ನು ಗುರುತಿಸುವುದು. 2) ವಾಯುವಿನ ಲಕ್ಷಣಗಳನ್ನು ಪ್ರಯೋಗಗಳ ಮೂಲಕ ತಿಳಿಯುವುದು.
3) ವಾಯು ಮಾಲಿನ್ಯದ ಕಾರಣಗಳು ಮತ್ತು ಪರಿಣಾಮಗಳು ಹಾಗೂ ಪರಿಹಾರಗಳನ್ನು ತಿಳಿಯುವುದು.

| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ – ತಂತ್ರಗಳು | ಶಿಕ್ಷಕರ ಸ್ವ-ಅವಲೋಕನ | ಅವಧಿ |
|---|---|---|---|---|---|
| **ತೊಡಗಿಸಿಕೊಳ್ಳುವಿಕೆ (Engage)** | ಕೆಲವು ಚಿಕ್ಕ ಚಿಕ್ಕ ಪ್ರಶ್ನೆಗಳ ಮೂಲಕ ವಿದ್ಯಾರ್ಥಿಗಳ ಪೂರ್ವಜ್ಞಾನವನ್ನು ಪರೀಕ್ಷಿಸುವುದು. 1) ಜೀವನಾವಶ್ಯಕ ವಸ್ತುಗಳು ಯಾವುವು? 2) ನೈಸರ್ಗಿಕ ಸಂಪನ್ಮೂಲಗಳು ಯಾವುವು? | ಪ್ರಶ್ನಾವಳಿ ಕಾರ್ಡ್ | ತಂತ್ರ: ಪರೀಕ್ಷಣ<br>ಸಾಧನ: ಮೌಖಿಕ ಪ್ರಶ್ನೆಗಳು | ಮೌಖಿಕ ಪ್ರಶ್ನೆಗಳಿಗೆ ಸೂಕ್ತ ಉತ್ತರ ನೀಡುವರು | |
| **ಪತ್ತೆ ಹಚ್ಚುವಿಕೆ (Explore)** | ವಿದ್ಯಾರ್ಥಿಗಳು ಗುಂಪಿನಲ್ಲಿ ಚರ್ಚಿಸಿ, ವಾಯುವಿನ ಇರುವಿಕೆಯನ್ನು ಪತ್ತೆ ಮಾಡುವ ವಿವಿಧ ವಿಧಾನಗಳನ್ನು ಗುರುತಿಸಲು ತಿಳಿಸುವುದು. | ಕಪ್ಪು ಹಲಗೆ | ತಂತ್ರ: ಚಟುವಟಿಕೆ<br>ಸಾಧನ: ಪಟ್ಟಿ ತಯಾರಿಕೆ | ವಾಯುವಿನ ಇರುವಿಕೆ ಯನ್ನು ಗುರುತಿಸುವರು | |
| **ವಿವರಣೆ / ವ್ಯಕ್ತಪಡಿಸುವಿಕೆ (Explain / Express)** | - ವಾಯುವಿನ ಘಟಕಗಳಾದ ನೈಟ್ರೋಜನ್, ಆಕ್ಸಿಜನ್, ಕಾರ್ಬನ್ ಡೈಆಕ್ಸೈಡ್, ನೀರಾವಿ, ಜಡಾನಿಲಗಳು, ಧೂಳಿನ ಕಣಗಳು & ಅವುಗಳ ಪ್ರಮಾಣಗಳನ್ನು ಚಿತ್ರಪಟದ ಸಹಾಯದಿಂದ ವಿವರಿಸುವುದು.<br>- ಗಾಜಿನ ತೊಟ್ಟಿ ಹಾಗೂ ಲೋಟಗಳ ಸಹಾಯದಿಂದ ಗಾಳಿಯು ಸ್ಥಳವನ್ನು ಆಕ್ರಮಿಸುತ್ತದೆ ಎಂಬುದನ್ನು ತಿಳಿಯುವುದು.<br>- ಎರಡು ಬಲೂನು ಹಾಗೂ ಕೋಲಿನ ಸಹಾಯದಿಂದ ಗಾಳಿಗೆ ತೂಕವಿದೆ ಎಂಬುದನ್ನು ಪ್ರಾಯೋಗಿಕವಾಗಿ ತಿಳಿಯುವುದು.<br>- ವಾಯು ಮಾಲಿನ್ಯದ ಕಾರಣಗಳು ಹಾಗೂ ಪರಿಣಾಮಗಳನ್ನು ವಿವರಿಸುವುದು. | ಚಿತ್ರಪಟ<br>ಗಾಜಿನ ತಟ್ಟೆ<br>ನೀರು<br>ಲೋಟ<br>ಬಲೂನುಗಳು | ತಂತ್ರ: ಚಟುವಟಿಕೆ<br>ಸಾಧನ: ಗೃಹಪಾಠ<br>ತಂತ್ರ: ಚಟುವಟಿಕೆ<br>ಸಾಧನ: ಬರವಣಿಗೆ<br>ತಂತ್ರ: ಚಟುವಟಿಕೆ<br>ಸಾಧನ: ಪಟ್ಟಿ ಮಾಡುವುದು | ಆಸಕ್ತಿಯಿಂದ ಗೃಹಪಾಠ ಮಾಡುವರು<br>ಪ್ರಯೋಗವನ್ನು ಅರ್ಥೈಸಿಕೊಳ್ಳುವರು<br>ವಾಯುಮಾಲಿನ್ಯವನ್ನು ತಿಳಿಯುವರು | |
| **ವಿಷಯದ ವಿಸ್ತರಣೆ (Expand)** | ವಿದ್ಯಾರ್ಥಿಗಳು ಗುಂಪಿನಲ್ಲಿ ಚರ್ಚಿಸಿ ವಾಯು ಮಾಲಿನ್ಯವನ್ನು ತಡೆಗಟ್ಟುವ ಕ್ರಮಗಳನ್ನು ವಿವರಿಸಲು ತಿಳಿಸುವುದು | ಚಟುವಟಿಕೆ | ತಂತ್ರ: ಚಟುವಟಿಕೆ<br>ಸಾಧನ: ಗುಂಪು ಚರ್ಚೆ | ಚರ್ಚೆಯಲ್ಲಿ ಆಸಕ್ತಿಯಿಂದ ಭಾಗವಹಿಸುವರು | |
| **ಮೌಲ್ಯಮಾಪನ (Evaluation)** | ಕಲಿತ ವಿಷಯದ ಮೇಲೆ ಹತ್ತು ಅಂಕಗಳಲ್ಲಿ ಲಿಖಿತ ಪರೀಕ್ಷೆ ನಡೆಸುವುದು | ಪ್ರಶ್ನೆಪತ್ರಿಕೆ | ತಂತ್ರ: ಪರೀಕ್ಷಣ<br>ಸಾಧನ: ಲಿಖಿತ ಪರೀಕ್ಷೆ | ಪರೀಕ್ಷೆಯಲ್ಲಿ ಉತ್ತಮ ಉತ್ತರ ನೀಡುವರು | |

ಶಿಕ್ಷಕರ ಸಹಿ ಮುಖ್ಯ ಶಿಕ್ಷಕರ ಸಹಿ

ಘಟಕ: 7 ಘಟಕದ ಹೆಸರು: **ನೀರು.** ದಿನಾಂಕ: ರಿಂದ ವರೆಗೆ

**ನಿರ್ದಿಷ್ಟ ಉದ್ದೇಶಗಳು** : 1) ನೀರಿನ ಆಕರಗಳನ್ನು ಗುರುತಿಸುವುದು. 2) ನೀರಿನ ಭೌತಿಕ ಗುಣಗಳನ್ನು ತಿಳಿಯುವುದು.

3) ಜಲ ಮಾಲಿನ್ಯದ ಕಾರಣಗಳು ಪರಿಣಾಮಗಳು ಹಾಗೂ ಪರಿಹಾರಗಳನ್ನು ತಿಳಿಯುವುದು.

| **ಕಲಿಕೆಯ ಅಂಶಗಳು** | **ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು** | **ಬೋಧನಾ ಕಲಿಕೋಪಕರಣಗಳು** | **ಮೌಲ್ಯಮಾಪನ ಸಾಧನ – ತಂತ್ರಗಳು** | **ಶಿಕ್ಷಕರ ಸ್ವ-ಅವಲೋಕನ** | **ಅವಧಿ** |
|---|---|---|---|---|---|
| **ತೊಡಗಿಸಿಕೊಳ್ಳುವಿಕೆ (Engage)** | ವಿದ್ಯಾರ್ಥಿಗಳನ್ನು ವೃತ್ತಾಕಾರವಾಗಿ ನಿಲ್ಲಿಸಿ, 'ನೀರು ಬೇಕು ನೀರು. ಏಕೆ ಬೇಕು ನೀರು' ಎಂದು ಕೇಳಿ, ಅವರ ಯಾವ ಕಾರ್ಯಕ್ಕೆ ನೀರು ಬೇಕು ಎಂಬುದನ್ನು ತಿಳಿಯಲು ಆಟವನ್ನು ಆಡಿಸುವುದು. | ಆಟ | ತಂತ್ರ: ಚಟುವಟಿಕೆ<br>ಸಾಧನ: ಆಟ | ಆಸಕ್ತಿಯಿಂದ ಆಟ ಆಡುವರು | |
| **ಪತ್ತೆ ಹಚ್ಚುವಿಕೆ (Explore)** | ವಿದ್ಯಾರ್ಥಿಗಳಿಗೆ ಗುಂಪುಗಳಲ್ಲಿ ಅವರಿಗೆ ನೀರು ದೊರೆಯುವ ಸ್ಥಳಗಳನ್ನು ಪಟ್ಟಿ ಮಾಡಲು ತಿಳಿಸುವುದು | ಬಾವಿ, ನಲ್ಲಿ, ಕೊಳವೆಬಾವಿ | ತಂತ್ರ: ಚಟುವಟಿಕೆ<br>ಸಾಧನ: ಪಟ್ಟಿ ಮಾಡುವುದು | ಚಟುವಟಿಕೆಯಲ್ಲಿ ಆಸಕ್ತಿಯನ್ನು ತೋರಿಸುವರು | |
| **ವಿವರಣೆ / ವ್ಯಕ್ತಪಡಿಸುವಿಕೆ (Explain / Express)** | - ನೀರಿನ ಆಕರಗಳಾದ ಸಾಗರಗಳು, ನದಿಗಳು, ಕೆರೆಗಳು, ಬಾವಿಗಳು, ಜಲಾಶಯಗಳು, ಕೊಳವೆಬಾವಿಗಳ ಕುರಿತು ತಿಳಿಸುವುದು.<br>- ನೀರಿನ ಗುಣಲಕ್ಷಣಗಳಾದ ಬಣ್ಣ, ರುಚಿ, ವಾಸನೆಗಳಿಗೆಲ್ಲ ಎಂಬುದನ್ನು ಹಾಗೂ ನೀರಿಗೆ ನಿರ್ದಿಷ್ಟ ಗಾತ್ರವಿಲ್ಲ, ನೀರಿಗೆ ತೂಕವಿದೆ ಎಂಬುದನ್ನು ಉದಾಹರಣೆಗಳ ಮೂಲಕ ಮತ್ತು ಪ್ರಾಯೋಗಿಕವಾಗಿ ತಿಳಿಸುವುದು.<br>- ಜಲ ಮಾಲಿನ್ಯದ ಕಾರಣಗಳು ಅದರ ಪರಿಣಾಮಗಳು ಹಾಗೂ ನೀರಿನ ಸಂರಕ್ಷಣೆಯ ವಿಧಾನಗಳನ್ನು ತಿಳಿಯುವುದು. | ಸಾಗರದ ಚಿತ್ರ<br>ನದಿಯ ಚಿತ್ರ<br>ನೀರು<br>ಲೋಟ<br>ಪಾತ್ರೆ<br>ಕೆರೆಯ ಚಿತ್ರ<br>ಒಳಚರಂಡಿಯ ಚಿತ್ರ | ತಂತ್ರ: ಪ್ರಯೋಗ<br>ಸಾಧನ:ಸಲಕರಣೆಗಳು<br>ತಂತ್ರ: ಚಟುವಟಿಕೆ<br>ಸಾಧನ: ಚಿತ್ರ ಸಂಗ್ರಹ | ನೀರಿನ ಆಕರಗಳನ್ನು ಗುರುತಿಸುವರು.<br>ನೀರಿನ ಗುಣಲಕ್ಷಣ ಗಳನ್ನು ತಿಳಿಯುವರು.<br>ಸೂಕ್ತ ಚಿತ್ರಗಳನ್ನು ಸಂಗ್ರಹಿಸುವರು. | |
| **ವಿಷಯದ ವಿಸ್ತರಣೆ (Expand)** | ವಿದ್ಯಾರ್ಥಿಗಳನ್ನು ಸಮೀಪದ ಜಲಾಶಯಕ್ಕೆ ಭೇಟಿ ನೀಡಿ ಅಲ್ಲಿ ಉಂಟಾಗುವ ಮಾಲಿನ್ಯಗಳನ್ನು ತಿಳಿಸುವುದು | ಸಂದರ್ಶನ | ತಂತ್ರ: ಚಟುವಟಿಕೆ<br>ಸಂದರ್ಶನ ಸೂಚಿ | ಸೂಕ್ತ ಮಾಹಿತಿಯನ್ನು ಸಂಗ್ರಹಿಸುವರು | |
| **ಮೌಲ್ಯಮಾಪನ (Evaluation)** | ವಿದ್ಯಾರ್ಥಿಗಳ ಕಲಿಕೆಯನ್ನು ಪರೀಕ್ಷಿಸಲು ರಸಪ್ರಶ್ನೆ ಕಾರ್ಯಕ್ರಮ ನಡೆಸುವುದು | ಪ್ರಶ್ನಾವಳಿ | ತಂತ್ರ: ಪರೀಕ್ಷಣ<br>ಸಾಧನ: ರಸಪ್ರಶ್ನೆ | ರಸ ಪ್ರಶ್ನೆಗಳಿಗೆ ಸರಿಯಾಗಿ ಉತ್ತರಿಸುವರು | |

ಶಿಕ್ಷಕರ ಸಹಿ ಮುಖ್ಯ ಶಿಕ್ಷಕರ ಸಹಿ

ಘಟಕ: 8 ಘಟಕದ ಹೆಸರು: **ಕೃಷಿ.** ದಿನಾಂಕ: ರಿಂದ ವರೆಗೆ

**ನಿರ್ದಿಷ್ಟ ಉದ್ದೇಶಗಳು** : 1) ಕೃಷಿಯ ಅರ್ಥವನ್ನು ತಿಳಿಯುವುದು. 2) ಕೃಷಿಯ ವಿಧಗಳನ್ನು ತಿಳಿಯುವುದು. 3) ನೀರಾವರಿ ಕೃಷಿ ಪದ್ಧತಿಯನ್ನು ಅರ್ಥೈಸಿಕೊಳ್ಳುವುದು.

| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ – ತಂತ್ರಗಳು | ಶಿಕ್ಷಕರ ಸ್ವ-ಅವಲೋಕನ | ಅವಧಿ |
|---|---|---|---|---|---|
| **ತೊಡಗಿಸಿಕೊಳ್ಳುವಿಕೆ (Engage)** | ವಿದ್ಯಾರ್ಥಿಗಳನ್ನು ವೃತ್ತಾಕಾರವಾಗಿ ನಿಲ್ಲಿಸಿ 'ನೇಗಿಲ ಹಿಡಿದು ಹೊಲದಲಿ ಹಾಡುತ ಉಳುವಾ ಯೋಗಿಯ ನೋಡಲ್ಲಿ' ಹಾಡನ್ನು ಹಾಡಿಸುವುದು. | ಹಾಡು | ತಂತ್ರ: ಚಟುವಟಿಕೆ<br>ಸಾಧನ: ಹಾಡು | ರಾಗಬದ್ಧವಾಗಿ ಹಾಡುವರು | |
| **ಪತ್ತೆ ಹಚ್ಚುವಿಕೆ (Explore)** | ವಿದ್ಯಾರ್ಥಿಗಳಿಗೆ ಗುಂಪಿನಲ್ಲಿ ಚರ್ಚಿಸಿ, ನಾವು ನೋಡಿರುವ ವಿವಿಧ ಬೆಳೆಗಳನ್ನು ಹೆಸರಿಸಲು ತಿಳಿಸುವುದು. | ರೈತನ ಚಿತ್ರ | ತಂತ್ರ: ಚಟುವಟಿಕೆ<br>ಸಾಧನ:ಗುಂಪು ಕಾರ್ಯ | ಬೆಳೆಗಳನ್ನು ಹೆಸರಿಸುವರು | |
| **ವಿವರಣೆ / ವ್ಯಕ್ತಪಡಿಸುವಿಕೆ (Explain / Express)** | -ಕೋಷ್ಟಕದ ಸಹಾಯದಿಂದ ವಿವಿಧ ಜಿಲ್ಲೆಗಳ ಪ್ರಮುಖ ಬೆಳೆಗಳನ್ನು ತಿಳಿಯುವುದು.<br>-ಕೃಷಿಯ ಹಂತಗಳಾದ ಹೊಲ ಉಳುವುದು, ಬಿತ್ತನೆ, ಗೊಬ್ಬರ ಹಾಕುವುದು, ಕೀಟನಾಶಕ ಸಿಂಪಡಣೆ, ಬೆಳೆಗಳ ಒಕ್ಕಣೆಗಳನ್ನು ಹಂತ ಹಂತವಾಗಿ ವಿವರಿಸುವುದು. ಮತ್ತು ಚಿತ್ರಗಳನ್ನು ಸಂಗ್ರಹಿಸುವುದು.<br>-ಕೃಷಿಕರಲ್ಲಿ ಕೃಷಿ ಕಾರ್ಮಿಕರು, ಸಣ್ಣ ಕೃಷಿಕರು ಹಾಗೂ ದೊಡ್ಡ ಕೃಷಿಕರ ಬಗ್ಗೆ ವಿವರಿಸಿ, ಕೃಷಿ ಕಾರ್ಮಿಕರ ಸಮಸ್ಯೆಗಳನ್ನು ತಿಳಿಸುವುದು. ಮತ್ತು ಸಮಸ್ಯೆ ಗಳನ್ನು ಪಟ್ಟಿ ಮಾಡಲು ತಿಳಿಸುವುದು.<br>-ಕೃಷಿಭೂಮಿಯ ಪ್ರಕಾರಗಳಾದ ಮಳೆಯಾಧಾರಿತ ಕೃಷಿ ಭೂಮಿ ಹಾಗೂ ನೀರಾವರಿ ಕೃಷಿ ಭೂಮಿ ಬಗ್ಗೆ ತಿಳಿಯುವುದು. ನೀರಾವರಿಯಲ್ಲಿ ಹನಿ ನೀರಾವರಿ ಪದ್ಧತಿ ಮತ್ತು ತುಂತುರು ನೀರಾವರಿ ಪದ್ಧತಿಗಳನ್ನು ವಿವರಿಸುವುದು.<br>-ಕೃಷಿ ಪದ್ಧತಿ ಗಳಾದ ಸಾವಯವ ಕೃಷಿ ಹಾಗೂ ರಾಸಾಯನಿಕ ಕೃಷಿಗಳ ಕುರಿತು ಚರ್ಚಿಸುವುದು. | ಬೆಳೆಗಳ ಚಿತ್ರ<br>ಉಳುಮೆ ಮಾಡುವ ಚಿತ್ರ<br>ಕೊಳವೆಬಾವಿಯ ಚಿತ್ರ<br>ಬಾವಿಯ ಚಿತ್ರ | ತಂತ್ರ ಚಟುವಟಿಕೆ<br>ಸಾಧನ: ಚಿತ್ರ ಸಂಗ್ರಹ<br>ತಂತ್ರ: ಚಟುವಟಿಕೆ<br>ಸಾಧನ: ಗೃಹಪಾಠ | ಸೂಕ್ತ ಚಿತ್ರಗಳನ್ನು ಸಂಗ್ರಹಿಸುವರು<br>ಕೃಷಿಕರ ವರ್ಗೀಕರಣ ತಿಳಿಯುವರು | |

| | | | | | |
|---|---|---|---|---|---|
| | -ಹೊಲದಲ್ಲಿ ಕೇವಲ ಬೆಳೆಯುವ ಸಾಂದ್ರ ಬೇಸಾಯ ಬೆಳೆಗಳ ಜೊತೆಗೆ ಪಶು ಸಾಕಣೆಯ, ಮಿಶ್ರ ಬೇಸಾಯ ಹಾಗೂ ತೋಟಗಾರಿಕೆಯನ್ನು ವಿವರಿಸುವುದು. ಮತ್ತು ರೈತರು ಬಳಸುವ ವಿವಿಧ ರಾಸಾಯನಿಕ ಗೊಬ್ಬರಗಳ ಹೆಸರುಗಳನ್ನು ಪಟ್ಟಿ ಮಾಡಲು ತಿಳಿಸುವುದು. | ಹಸುವಿನ ಚಿತ್ರ<br>ಕೋಳಿಯ ಚಿತ್ರ | ತಂತ್ರ: ಚಟುವಟಿಕೆ<br>ಸಾಧನ: ನಿಯೋಜಿತ ಕಾರ್ಯ | ಕೃಷಿ ಪದ್ಧತಿಗಳನ್ನು ತಿಳಿಯುವರು | |
| **ವಿಷಯದ ವಿಸ್ತರಣೆ**<br>**(Expand)** | ವಿದ್ಯಾರ್ಥಿಗಳನ್ನು ಸಮೀಪದ ಹೊಲ ಅಥವಾ ತೋಟಕ್ಕೆ ಭೇಟಿ ನೀಡಲು ತಿಳಿಸಿ, ಅಲ್ಲಿ ಬೆಳೆಯುವ ಬೆಳೆಗಳು ಹಾಗೂ ಬಳಸುವ ರಸಗೊಬ್ಬರಗಳು, ಸಾಕಣೆಯ ಕುರಿತು ಮಾಹಿತಿ ಸಂಗ್ರಹಿಸುವುದು. | **ಹೊಲ / ತೋಟ** | ತಂತ್ರ: ಚಟುವಟಿಕೆ<br>ಸಾಧನ: ಸಂದರ್ಶನ ಸೂಚಿ | ಸೂಕ್ತ ಮಾಹಿತಿಯನ್ನು ಸಂಗ್ರಹಿಸುವವರು | |
| **ಮೌಲ್ಯಮಾಪನ**<br>**(Evaluation)** | ಕೆಲವು ಚಿಕ್ಕ ಚಿಕ್ಕ ಪ್ರಶ್ನೆಗಳ ಮೂಲಕ ವಿದ್ಯಾರ್ಥಿಗಳ ಕಲಿಕೆಯನ್ನು ಪರೀಕ್ಷಿಸುವುದು.<br>1) ನಿನ್ನ ಜಿಲ್ಲೆಯ ಪ್ರಮುಖ ಬೆಳೆಗಳು ಯಾವುವು?<br>2) ಕೃಷಿಕರ ಪ್ರಕಾರಗಳಾವುವು?<br>3) ಹನಿ ನೀರಾವರಿ ಎಂದರೇನು? | ಪ್ರಶ್ನಾವಳಿ ಕಾರ್ಡ್ | ತಂತ್ರ: ಪರೀಕ್ಷಣ<br>ಸಾಧನ: ಮೌಖಿಕ ಪರೀಕ್ಷೆ | ಪ್ರಶ್ನೆಗಳಿಗೆ ಸರಿಯಾಗಿ ಉತ್ತರಿಸುವವರು | |

ಶಿಕ್ಷಕರ ಸಹಿ

ಮುಖ್ಯ ಶಿಕ್ಷಕರ ಸಹಿ

ಘಟಕ: 9 ಘಟಕದ ಹೆಸರು: **ಆಹಾರ – ಜೀವದ ಜೀವಾಳ.** ದಿನಾಂಕ: ರಿಂದ ವರೆಗೆ

**ನಿರ್ದಿಷ್ಟ ಉದ್ದೇಶಗಳು**: 1) ಆಹಾರ ದೊರೆಯುವ ಮೂಲಗಳನ್ನು ತಿಳಿಯುವುದು. 2) ಬದಲಾಗುತ್ತಿರುವ ಆಹಾರ ಪದ್ಧತಿ ಮತ್ತು ಅದರ ಪರಿಣಾಮಗಳನ್ನು ಗುರುತಿಸುವುದು.
3) ಆಹಾರ ಪೋಲಾಗದಂತೆ ಸಂರಕ್ಷಿಸುವ ಕ್ರಮಗಳನ್ನು ತಿಳಿಯುವುದು

| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ – ತಂತ್ರಗಳು | ಶಿಕ್ಷಕರ ಸ್ವ-ಅವಲೋಕನ | ಅವಧಿ |
|---|---|---|---|---|---|
| **ತೊಡಗಿಸಿಕೊಳ್ಳುವಿಕೆ (Engage)** | ಕೆಲವು ಚಿಕ್ಕ ಚಿಕ್ಕ ಪ್ರಶ್ನೆಗಳ ಮೂಲಕ ಮಕ್ಕಳ ಪೂರ್ವ ಜ್ಞಾನವನ್ನು ಪರೀಕ್ಷಿಸುವುದು. 1) ನಮಗೆ ಆಹಾರ ಏಕೆ ಬೇಕು?<br>2) ಬೆಳವಣಿಗೆಗೆ ಸಹಾಯಕವಾದ ಪೋಷಕಾಂಶ ಯಾವುದು? | ಪ್ರಶ್ನಾವಳಿ ಕಾರ್ಡ್ | ತಂತ್ರ: ಪರೀಕ್ಷಣ<br>ಸಾಧನ: ಮೌಖಿಕ ಪ್ರಶ್ನೆ | ಮೌಖಿಕ ಪ್ರಶ್ನೆಗಳಿಗೆ ಸೂಕ್ತ ಉತ್ತರ ನೀಡುವರು | |
| **ಪತ್ತೆ ಹಚ್ಚುವಿಕೆ (Explore)** | ವಿದ್ಯಾರ್ಥಿಗಳು ಗುಂಪಿನಲ್ಲಿ ನಾವು ನಿತ್ಯ ಸೇವಿಸುವ ಆಹಾರ ಪದಾರ್ಥಗಳನ್ನು ಪಟ್ಟಿ ಮಾಡಲು ತಿಳಿಸುವುದು. | ಕಪ್ಪು ಹಲಗೆ | ತಂತ್ರ: ಚಟುವಟಿಕೆ<br>ಸಾಧನ: ಗುಂಪು ಕಾರ್ಯ | ಆಹಾರ ಪದಾರ್ಥಗಳನ್ನು ಗುರುತಿಸುವರು | |
| **ವಿವರಣೆ / ವ್ಯಕ್ತಪಡಿಸುವಿಕೆ (Explain / Express)** | -ಕೋಷ್ಟಕದ ಸಹಾಯದಿಂದ ಕಾರ್ಬೋಹೈಡ್ರೇಟ್, ಪ್ರೊಟೀನ್, ಲಿಪಿಡ್, ವಿಟಮಿನ್, ನಾರಿನಂಶವಿರುವ ಆಹಾರ ಪದಾರ್ಥಗಳನ್ನು ತಿಳಿಯುವುದು.<br><br>-ಸಸ್ಯಮೂಲ ಹಾಗೂ ಪ್ರಾಣಿ ಮೂಲದ ಆಹಾರ ಪದಾರ್ಥಗಳನ್ನು ಗುರುತಿಸುವುದು.<br><br>-ಸಿರಿ ಧಾನ್ಯಗಳು ಹಾಗೂ ಅವುಗಳ ಉಪಯೋಗಗಳನ್ನು ತಿಳಿಯುವುದು.<br>-ಕರ್ನಾಟಕದ ವಿವಿಧ ಪ್ರದೇಶಗಳ ಪ್ರಮುಖ ಆಹಾರ ಪದಾರ್ಥಗಳನ್ನು ಗುರುತಿಸುವುದು. ಮತ್ತು ವಿವಿಧ ಧಾನ್ಯಗಳನ್ನು ಸಂಗ್ರಸಲು ತಿಳಿಸುವುದು.<br><br>-ವಿವಿಧ ಪ್ರದೇಶಗಳಲ್ಲಿ ಬಳಸುವ ಆಹಾರ ಪದಾರ್ಥಗಳ ಬಗ್ಗೆ ತಿಳಿಸುವುದು. | ಚಿತ್ರಪಟ, ಕ್ಯಾರೆಟ್, ರಾಗಿ, ಗೋಧಿ, ಜೋಳ, ವಿವಿಧ ತರಕಾರಿಗಳು, ಹಾಲು, ಮೊಟ್ಟೆ, ನವಣೆ, ಸಾಮೆ, ನೂಡಲ್ಸ್ ಚಿತ್ರ ಗೋಬಿ ಮಂಚೂರಿ ಚಿತ್ರ, ಉಪ್ಪಿನಕಾಯಿ, | ತಂತ್ರ: ಬರವಣಿಗೆ<br>ಸಾಧನ: ಗೃಹಪಾಠ<br><br>ತಂತ್ರ: ಚಟುವಟಿಕೆ<br>ಸಾಧನ; ಧಾನ್ಯ ಸಂಗ್ರಹ | ಪೋಷಕಾಂಶಗಳನ್ನು ತಿಳಿದಿರುವರು<br><br>ಸಿರಿಧಾನ್ಯಗಳನ್ನು ಗುರುತಿಸುವರು<br><br>ತಮ್ಮ ಜಿಲ್ಲೆಯ ಆಹಾರ ತಿಳಿಯುವರು | |

| | | | | | |
|---|---|---|---|---|---|
| | -ಬದಲಾದ ಆಹಾರ ಪದ್ಧತಿಯಲ್ಲಿ ಫಾಸ್ಟ್ ಫುಡ್, ಜಂಕ್ ಫುಡ್, ಸಿದ್ದಪಡಿಸಿದ ಆಹಾರ ಪಟ್ಟಣ, ಇವುಗಳಿಂದ ನಮ್ಮ ಆರೋಗ್ಯದ ಮೇಲಾಗುವ ದುಷ್ಪರಿಣಾಮಗಳ ಬಗ್ಗೆ ವಿವರಿಸುವುದು. ಮತ್ತು ವಿವಿಧ ರೀತಿಯ ಫಾಸ್ಟ್ ಫುಡ್ ಗಳ ಹೆಸರುಗಳನ್ನು ಪಟ್ಟಿ ಮಾಡಲು ತಿಳಿಸುವುದು.<br><br>-ಶ್ರೀಮಂತರ ಮನೆಗಳಲ್ಲಿ ದೊಡ್ಡ ದೊಡ್ಡ ಹೋಟೆಲ್ಗಳಲ್ಲಿ ಆಹಾರ ಪೋಲಾಗುವುದನ್ನು ತಿಳಿಸಿ, ಆಹಾರವನ್ನು ಸಂರಕ್ಷಿಸುವ ಕ್ರಮಗಳನ್ನು ತಿಳಿಯುವುದು. ಮತ್ತು ಆಹಾರ ಪೋಲಾಗುವುದನ್ನು ತಡೆಗಟ್ಟುವ ಬಗ್ಗೆ ಚರ್ಚಿಸುವುದು. | ಒಣದ್ರಾಕ್ಷಿ | ತಂತ್ರ; ಚಟುವಟಿಕೆ<br>ಸಾಧನ: ಪಟ್ಟಿ ಮಾಡುವುದು<br><br>ತಂತ್ರ: ಚರ್ಚೆ<br>ಸಾಧನ: ಗುಂಪು ಚರ್ಚೆ | ಫಾಸ್ಟ್ ಫುಡ್ ಗಳ ಹೆಸರುಗಳನ್ನು ಪಟ್ಟಿ ಮಾಡುವರು.<br><br>ಚರ್ಚೆಯಲ್ಲಿ ಆಸಕ್ತಿಯಿಂದ ಭಾಗವಹಿಸುವರು | |
| **ವಿಷಯದ ವಿಸ್ತರಣೆ**<br>**(Expand)** | ವಿದ್ಯಾರ್ಥಿಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಕಾರ್ಬೋಹೈಡ್ರೇಟ್ ಪ್ರೋಟೀನ್ ವಿಟಮಿನ್ ಲಿಪಿಡ್ ಮತ್ತು ನಾರು ಪದಾರ್ಥಗಳು ಇರುವ ಆಹಾರ ಪದಾರ್ಥಗಳನ್ನು ಸಂಗ್ರಹಿಸಲು ತಿಳಿಸುವುದು | ಸಂದರ್ಶನ | ತಂತ್ರ: ಚಟುವಟಿಕೆ<br>ಸಾಧನ: ಚಾರ್ಟ್ ತಯಾರಿಕೆ | ಉತ್ತಮವಾಗಿ ಚಾರ್ಟ್ ತಯಾರಿಸುವರು | |
| **ಮೌಲ್ಯಮಾಪನ**<br>**(Evaluation)** | ವಿದ್ಯಾರ್ಥಿಗಳ ಕಲಿಕೆಯನ್ನು ಪರೀಕ್ಷಿಸಲು ರಸಪ್ರಶ್ನೆ ಕಾರ್ಯಕ್ರಮ ನಡೆಸುವುದು | ಪ್ರಶ್ನಾವಳಿ ಪಟ್ಟಿ | ತಂತ್ರ: ಪರೀಕ್ಷಣ<br>ಸಾಧನ: ರಸಪ್ರಶ್ನೆ | ಪ್ರಶ್ನೆಗಳಿಗೆ ಸರಿಯಾದ ಉತ್ತರ ನೀಡುವರು | |

ಶಿಕ್ಷಕರ ಸಹಿ

ಮುಖ್ಯ ಶಿಕ್ಷಕರ ಸಹಿ

ಘಟಕ: 10 ಘಟಕದ ಹೆಸರು: **ಜನವಸತಿಗಳು.** ದಿನಾಂಕ: ರಿಂದ ವರೆಗೆ

**ನಿರ್ದಿಷ್ಟ ಉದ್ದೇಶಗಳು** : 1) ಸಾಮೂಹಿಕ ಹಾಗೂ ವೈಯಕ್ತಿಕ ವಸತಿ ಯೋಜನೆ ಗಳನ್ನು ಗುರುತಿಸುವುದು. 2) ಗ್ರಾಮೀಣ ಹಾಗೂ ನಗರ ವಸತಿ ಸಮಸ್ಯೆ ಗಳನ್ನು ತಿಳಿಯುವುದು. 3) ಉತ್ತಮ ವಸತಿಯ ಲಕ್ಷಣಗಳನ್ನು ತಿಳಿಯುವುದು.

| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ – ತಂತ್ರಗಳು | ಶಿಕ್ಷಕರ ಸ್ವ-ಅವಲೋಕನ | ಅವಧಿ |
|---|---|---|---|---|---|
| **ತೊಡಗಿಸಿಕೊಳ್ಳುವಿಕೆ (Engage)** | ವಿದ್ಯಾರ್ಥಿಗಳು ತಮ್ಮ ತಮ್ಮ ಮನೆಗಳ ಪ್ರಕಾರಗಳು ಹಾಗೂ ಅಲ್ಲಿ ದೊರೆಯುರುವ ಸೌಲಭ್ಯಗಳನ್ನು ಪಟ್ಟಿ ಮಾಡಲು ತಿಳಿಸುವುದು. | ಮನೆಯ ಚಿತ್ರ | ತಂತ್ರ: ಚಟುವಟಿಕೆ<br>ಸಾಧನ: ಮಾಹಿತಿ ಸಂಗ್ರಹ | ಸೂಕ್ತ ಮಾಹಿತಿ ಸಂಗ್ರಹಿಸುವರು | |
| **ಪತ್ತೆ ಹಚ್ಚುವಿಕೆ (Explore)** | ವಿದ್ಯಾರ್ಥಿಗಳಿಗೆ ಗುಂಪಿನಲ್ಲಿ ತಮ್ಮ ಊರಿನಲ್ಲಿರುವ ವಿವಿಧ ರೀತಿಯ ಮನೆಗಳನ್ನು ಪಟ್ಟಿಮಾಡಲು ತಿಳಿಸುವುದು | ಕಪ್ಪು ಹಲಗೆ | ತಂತ್ರ: ಚಟುವಟಿಕೆ<br>ಸಾಧನ: ಪಟ್ಟಿ ಮಾಡುವುದು | ಮನೆಯ ವಿಧಗಳನ್ನು ಗುರುತಿಸುವರು | |
| **ವಿವರಣೆ / ವ್ಯಕ್ತಪಡಿಸುವಿಕೆ (Explain / Express)** | -ಗ್ರಾಮೀಣ ಹಾಗೂ ನಗರಗಳಲ್ಲಿ ಕಂಡುಬರುವ ಸಾಮೂಹಿಕ ವಸತಿ ಯೋಜನೆಗಳು ಹಾಗೂ ಬಹುಮಹಡಿ ಕಟ್ಟಡಗಳ ರಚನೆ ಹಾಗೂ ಉದ್ದೇಶಗಳನ್ನು ತಿಳಿಯುವುದು. ಮತ್ತು ಬಹುಮಹಡಿ ಕಟ್ಟಡಗಳ ಚಿತ್ರಗಳನ್ನು ಸಂಗ್ರಹಿಸಲು ತಿಳಿಸುವುದು.<br>-ಸಾಮೂಹಿಕ ವಸತಿ ಯೋಜನೆಗಳಲ್ಲಿ ಇರಬೇಕಾದ ಸೌಲಭ್ಯಗಳಾದ ಜೀವನಾವಶ್ಯಕ ವಸ್ತುಗಳು ಆರೋಗ್ಯ, ನೈರ್ಮಲ್ಯ, ಸಂಚಾರ, ಮನರಂಜನೆಗಳನ್ನು ತಿಳಿಯುವುದು.<br>-ನಗರ ವಸತಿ ಹಾಗೂ ಗ್ರಾಮೀಣ ವಸತಿ ಪ್ರದೇಶಗಳ ಸಮಸ್ಯೆಗಳು ಹಾಗೂ ಉತ್ತಮ ವಸತಿಯ ಲಕ್ಷಣಗಳನ್ನು ತಿಳಿಯುವುದು ಹಾಗೂ ಲಕ್ಷಣಗಳನ್ನು ಪಟ್ಟಿ ಮಾಡಲು ತಿಳಿಸುವುದು. | ಅಪಾರ್ಟ್ಮೆಂಟ್ ಚಿತ್ರ<br>ವಿವಿಧ ಕಟ್ಟಡ ಮತ್ತು ಸೌಲಭ್ಯಗಳ ಚಾರ್ಟ್ | ತಂತ್ರ ಚಟುವಟಿಕೆ ಸಾಧನ ಚಿತ್ರ ಸಂಗ್ರಹ<br>ತಂತ್ರ ಬರವಣಿಗೆ ಸಾಧನ ಗೃಹಪಾಠ | ಬಹುಮಹಡಿ ಕಟ್ಟಡಗಳನ್ನು ಗುರುತಿಸುವರು<br>ಉತ್ತಮ ವಸತಿಯ ಲಕ್ಷಣಗಳನ್ನು ತಿಳಿಯುವರು | |
| **ವಿಷಯದ ವಿಸ್ತರಣೆ (Expand)** | ವಿದ್ಯಾರ್ಥಿಗಳ ಗುಂಪುಗಳಲ್ಲಿ ತಮ್ಮ ಸಮೀಪವಿರುವ ಸಾಮೂಹಿಕ ವಸತಿ ಪ್ರದೇಶ ಅಥವಾ ಬಹುಮಹಡಿ ವಸತಿಗಳಿಗೆ ಭೇಟಿ ನೀಡಿ, ಅಲ್ಲಿರುವ ಸೌಲಭ್ಯಗಳು ಹಾಗೂ ಸಮಸ್ಯೆಗಳನ್ನು ಪಟ್ಟಿ ಮಾಡಲು ತಳಿಸುವುದು. | ಸಂದರ್ಶನ | ತಂತ್ರ; ಸಂದರ್ಶನ<br>ಸಾಧನ: ಸಂದರ್ಶನ ಸೂಚಿ | ಸಂದರ್ಶನದಲ್ಲಿ ಆಸಕ್ತಿ ತೋರುವರು | |
| **ಮೌಲ್ಯಮಾಪನ (Evaluation)** | ಚಿಕ್ಕಚಿಕ್ಕ ಪ್ರಶ್ನೆಗಳ ಮೂಲಕ ಕಲಿಕೆಯನ್ನು ಪರೀಕ್ಷಿಸುವುದು 1) ಮನೆಯ ವಿಧಗಳಾವುವು? 2) ನಗರ ವಸತಿಯ ಸಮಸ್ಯೆಗಳಾವುವು? 3) ಉತ್ತಮ ವಸತಿಯ ಲಕ್ಷಣಗಳಾವುವು? | ಪ್ರಶ್ನಾವಳಿ ಕಾರ್ಡ್ | ತಂತ್ರ: ಪರೀಕ್ಷಣಾ<br>ಸಾಧನ: ಮೌಖಿಕ ಪರೀಕ್ಷೆ | ಪ್ರಶ್ನೆಗಳಿಗೆ ಸೂಕ್ತ ಉತ್ತರ ನೀಡುವರು | |

ಶಿಕ್ಷಕರ ಸಹಿ ಮುಖ್ಯ ಶಿಕ್ಷಕರ ಸಹಿ

ಘಟಕ: 11 ಘಟಕದ ಹೆಸರು: **ವಸ್ತು ಸ್ವರೂಪ.** ದಿನಾಂಕ: ರಿಂದ ವರೆಗೆ

**ನಿರ್ಧಿಷ್ಟ ಉದ್ದೇಶಗಳು** : 1) ದ್ರವ್ಯದ ಲಕ್ಷಣಗಳನ್ನು ಗುರುತಿಸುವುದು.

2) ದ್ರವ್ಯದ ಸ್ಥಿತಿಗಳ ಬಗ್ಗೆ ತಿಳಿಯುವುದು.

3) ರಾಶಿ, ಒತ್ತಡ ಮತ್ತು ಪ್ಲವನತೆಗಳ ಬಗ್ಗೆ ತಿಳಿಯುವುದು.

| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ – ತಂತ್ರಗಳು | ಶಿಕ್ಷಕರ ಸ್ವ-ಅವಲೋಕನ | ಅವಧಿ |
|---|---|---|---|---|---|
| **ತೊಡಗಿಸಿಕೊಳ್ಳುವಿಕೆ (Engage)** | ವಿದ್ಯಾರ್ಥಿಗಳಿಗೆ ತಾವು ನಿತ್ಯಜೀವನದಲ್ಲಿ ನೋಡಿರುವ ವಸ್ತುಗಳನ್ನು ಹೆಸರಿಸಲು ತಿಳಿಸುವುದು. | ಕಪ್ಪುಹಲಗೆ | ತಂತ್ರ: ಚಟುವಟಿಕೆ<br>ಸಾಧನ: ಬರವಣಿಗೆ | ವಿವಿಧ ವಸ್ತುಗಳನ್ನು ಹೆಸರಿಸುವರು | |
| **ಪತ್ತೆ ಹಚ್ಚುವಿಕೆ (Explore)** | ವಿದ್ಯಾರ್ಥಿಗಳಿಗೆ ವಿವಿಧ ವಸ್ತುಗಳನ್ನು ಸಂಗ್ರಹಿಸಲು ತಿಳಿಸುವುದು. | ಪೆನ್ಸಿಲ್, ನೀರು, ಎಣ್ಣೆ, ಬಾಕ್ಸ್ ,ನೋಟ್ ಬುಕ್ | ತಂತ್ರ: ಚಟುವಟಿಕೆ<br>ಸಾಧನ: ಸಂಗ್ರಹ | ವಿವಿಧ ವಸ್ತುಗಳನ್ನು ಸಂಗ್ರಹಿಸುವರು | |
| **ವಿವರಣೆ / ವ್ಯಕ್ತಪಡಿಸುವಿಕೆ (Explain / Express)** | -ವಸ್ತುಗಳನ್ನು ದ್ರವ್ಯಗಳ ಎಂದು ತಿಳಿಸಿ ದ್ರವ್ಯಗಳು ಕಣ್ಣಿಗೆ ಕಾಣದ ಅತ್ಯಂತ ಚಿಕ್ಕ ಕಣಗಳಿಂದ ಆಗಿವೆ ಎಂಬುದನ್ನು ಪ್ರಾಯೋಗಿಕವಾಗಿ ವಿವರಿಸುವುದು.<br><br>-ಒಂದು ಗಾಜಿನ ಜರಡಿಯಲ್ಲಿ ಕಂಠಪೂರ್ತಿ ನೀರು ತೆಗೆದುಕೊಂಡು ಅದರಲ್ಲಿ ಒಂದು ಕಲ್ಲಿನ ಚೂರು ಹಾಕಿದಾಗ ನೀರು ಹೊರ ಬೀಳುವುದನ್ನು ತೋರಿಸಿ, ದ್ರವ್ಯವು ಸ್ಥಳವನ್ನು ಆಕ್ರಮಿಸುತ್ತದೆ ಎಂಬುದನ್ನು ಸರಳ ಪ್ರಾಯೋಗಗಳ ಮೂಲಕ ವಿವರಿಸುವುದು.<br><br>-ತಕ್ಕಡಿಯ ಸಹಾಯದಿಂದ ವಿವಿಧ ವಸ್ತುಗಳ ತೂಕವನ್ನು ಮಾಡುವುದು.<br><br>-ದ್ರವ್ಯದ ಸ್ಥಿತಿಗಳಾದ ಘನ, ದ್ರವ, ಮತ್ತು ಅನಿಲಗಳನ್ನು ತಿಳಿಸುವುದು.<br><br>-ದ್ರವಗಳು ತಾವಿರುವ ಪಾತ್ರಗಳ ಆಕಾರವನ್ನು ಹೊಂದುತ್ತವೆ ಎಂಬುದನ್ನು | ಚಾಕ್ ಪೀಸ್ ಪುಡಿ,<br><br>ನೀರು,<br>ಗಾಜಿನ ಜರಡಿ,<br>ಕಲ್ಲು,<br><br>ತಕ್ಕಡಿ,<br>ವಸ್ತುಗಳು,<br><br>ವಿವಿಧ ಆಕಾರದ ಪಾತ್ರಗಳು, | ತಂತ್ರ: ಚಟುವಟಿಕೆ<br>ಸಾಧನ: ಪ್ರಯೋಗ<br><br>ತಂತ್ರ: ಚಟುವಟಿಕೆ<br>ಸಾಧನ: ಮಾದರಿ ತಯಾರಿಕೆ<br><br>ತಂತ್ರ: ಚಟುವಟಿಕೆ | ಪ್ರಯೋಗದಲ್ಲಿ ಆಸಕ್ತಿ ತೋರಿಸುವರು<br><br>ತೂಕ ಮಾಡುವ ವಿಧಾನ ತಿಳಿಯುವರು | |

| | | | | | |
|---|---|---|---|---|---|
| | ಸರಳ ಪ್ರಯೋಗದ ಮೂಲಕ ತಿಳಿಸುವುದು. ಮತ್ತು ವಿವಿಧ ಧಾರಕಗಳ ಚಿತ್ರ ಬಿಡಿಸಲು ತಿಳಿಸುವುದು.<br><br>-ಒಂದು ಮಂಜುಗಡ್ಡೆಯನ್ನು ತೆಗೆದುಕೊಂಡು ಅದನ್ನು ಕರಗಿಸಿದಾಗ ದ್ರವರೂಪಕ್ಕೆ ಹಾಗೂ ಆ ನೀರನ್ನು ಕಾಯಿಸಿದಾಗ ಮತ್ತದು ಆವಿಯಾಗಿ ಬದಲಾಗುವುದನ್ನು ತಿಳಿಸುವುದು.<br><br>-ಪ್ಲಾಸ್ಟಿಕ್ ಪ್ಲೇಟು ಕಬ್ಬಿಣದ ಚೂರು ಗಳ ಸಹಾಯದಿಂದ ನೀರಿನಲ್ಲಿ ತೇಲುವ ಹಾಗು ಮುಳುಗುವ ವಸ್ತುಗಳನ್ನು ತಿಳಿಯುವುದು. ಮತ್ತು ತೇಲುವ ಮತ್ತು ಮುಳುಗುವ ವಸ್ತುಗಳ ಹೆಸರುಗಳನ್ನು ಸಂಗ್ರಹಿಸಲು ಹೇಳುವುದು. | ಮಂಜುಗಡ್ಡೆ, ನೀರಾವಿ | ಸಾಧನ: ಚಿತ್ರರಚನೆ<br><br>ತಂತ್ರ: ಬರವಣಿಗೆ<br>ಸಾಧನ: ಹೆಸರು ಸಂಗ್ರಹ | ಚಿತ್ರ ರಚನಾ ಕೌಶಲ್ಯ ಹೊಂದಿರುವರು<br><br>ತೇಲುವ ಮತ್ತು ಮುಳುಗುವ ವಸ್ತುಗಳ ಹೆಸರುಗಳನ್ನು ಸಂಗ್ರಹಿಸುವರು | |
| **ವಿಷಯದ ವಿಸ್ತರಣೆ**<br>**(Expand)** | ವಿದ್ಯಾರ್ಥಿಗಳಿಗೆ ಗುಂಪಿನಲ್ಲಿ ನೀರಿನಲ್ಲಿ ಕರಗುವ ಹಾಗೂ ಕರಗದಿರುವ ವಸ್ತುಗಳನ್ನು ಪಟ್ಟಿ ಮಾಡಲು ತಿಳಿಸುವುದು. | ನೀರು ಪ್ಲಾಸ್ಟಿಕ್ ಪ್ಲೇಟ್, ಕಬ್ಬಿಣದ ಚೂರು | ತಂತ್ರ: ಚಟುವಟಿಕೆ<br>ಸಾಧನ: ಪಟ್ಟಿ ಮಾಡುವುದು | ನೀರಿನಲ್ಲಿ ಕರಗಿರುವ ಕರಗದಿರುವ ವಸ್ತುಗಳನ್ನು ತಿಳಿದಿರುವರು | |
| **ಮೌಲ್ಯಮಾಪನ**<br>**(Evaluation)** | ವಿದ್ಯಾರ್ಥಿಗಳ ಕಲಿಕೆಯನ್ನು ಪರೀಕ್ಷಿಸಲು 10 ಅಂಕಗಳ ಲಿಖಿತ ಪರೀಕ್ಷೆ ನಡೆಸುವುದು. | ಪ್ರಶ್ನೆ ಪತ್ರಿಕೆ | ತಂತ್ರ: ಪರೀಕ್ಷಣಾ<br>ಸಾಧನ: ಲಿಖಿತ ಪರೀಕ್ಷೆ | ಪ್ರಶ್ನೆಗಳಿಗೆ ಸರಿಯಾಗಿ ಉತ್ತರ ನೀಡುವರು | |

ಶಿಕ್ಷಕರ ಸಹಿ                                                ಮುಖ್ಯ ಶಿಕ್ಷಕರ ಸಹಿ

ಘಟಕ: 12 ಘಟಕದ ಹೆಸರು: **ಧಾತು, ಸಂಯುಕ್ತ ಮತ್ತು ಮಿಶ್ರಣಗಳು.** ದಿನಾಂಕ: ರಿಂದ ವರೆಗೆ

**ನಿರ್ಧಿಷ್ಟ ಉದ್ದೇಶಗಳು** : 1) ವಸ್ತುಗಳನ್ನು ಧಾತು, ಸಂಯುಕ್ತ ಮತ್ತು ಮಿಶ್ರಣಗಳಾಗಿ ವಿಂಗಡಿಸುವುದು. 2) ಧಾತು, ಸಂಯುಕ್ತ ಮತ್ತು ಮಿಶ್ರಣಗಳ ವ್ಯತ್ಯಾಸಗಳನ್ನು ಗುರುತಿಸುವರು.

| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ – ತಂತ್ರಗಳು | ಶಿಕ್ಷಕರ ಸ್ವ-ಅವಲೋಕನ | ಅವಧಿ |
|---|---|---|---|---|---|
| **ತೊಡಗಿಸಿಕೊಳ್ಳುವಿಕೆ (Engage)** | ಕೆಲವು ಚಿಕ್ಕ ಚಿಕ್ಕ ಪ್ರಶ್ನೆಗಳ ಮೂಲಕ ವಿದ್ಯಾರ್ಥಿಗಳ ಪೂರ್ವ ಜ್ಞಾನವನ್ನು ಪರೀಕ್ಷಿಸುವುದು. 1) ವಸ್ತುವಿನ ಸ್ಥಿತಿಗಳು ಯಾವುವು? 2) ನೀರಿನಲ್ಲಿ ತೇಲುವ ಮತ್ತು ಮುಳುಗುವ ವಸ್ತುಗಳು ಯಾವುವು? | ಪ್ರಶ್ನಾವಳಿ ಕಾರ್ಡ್ | ತಂತ್ರ: ಪರೀಕ್ಷಣ ಸಾಧನ: ಮೌಖಿಕ ಪರೀಕ್ಷೆ | ಮೌಖಿಕ ಪ್ರಶ್ನೆಗಳಿಗೆ ಸೂಕ್ತ ಉತ್ತರ ನೀಡುವರು | |
| **ಪತ್ತೆ ಹಚ್ಚುವಿಕೆ (Explore)** | ವಿದ್ಯಾರ್ಥಿಗಳು ಗುಂಪಿನಲ್ಲಿ ನೈಸರ್ಗಿಕವಾಗಿ ತಮ್ಮ ಸುತ್ತ ಮುತ್ತ ದೊರೆಯುವ ವಸ್ತುಗಳನ್ನು ಪಟ್ಟಿ ಮಾಡಲು ತಿಳಿಸುವುದು. | ಕಪ್ಪು ಹಲಗೆ | ತಂತ್ರ: ಚಟುವಟಿಕೆ ಸಾಧನ: ಪಟ್ಟಿ ಮಾಡುವುದು | ಚಟುವಟಿಕೆಯಲ್ಲಿ ಆಸಕ್ತಿಯಿಂದ ಭಾಗವಹಿಸುವರು | |
| **ವಿವರಣೆ / ವ್ಯಕ್ತಪಡಿಸುವಿಕೆ (Explain / Express)** | -ಒಂದೇ ರೀತಿಯ ಅಣುಗಳಿಂದ ಮಾಡಲ್ಪಟ್ಟ ವಸ್ತುವೇ ಧಾತು ಎಂದು ತಿಳಿಸಿ, ಧಾತುಗಳ ಅತ್ಯಂತ ಚಿಕ್ಕ ಕಣವೇ ಪರಮಾಣು ಎಂದು ವಿವರಿಸಿ, ಧಾತುಗಳಿಗೆ ಉದಾಹರಣೆ ಕೊಡುವುದು. & 10 ಧಾತುಗಳ ಹೆಸರು ಬರೆಯಲು ಹೇಳುವುದು.<br>-ಎರಡು ಅಥವಾ ಹೆಚ್ಚು ದಾತುಗಳು ರಾಸಾಯನಿಕವಾಗಿ ಸೇರಿದಾಗ ಸಂಯುಕ್ತಗಳು ಉಂಟಾಗುತ್ತವೆ ಎಂಬುದನ್ನು ತಿಳಿಸಿ, ಉದಾಹರಣೆಗಳನ್ನು ನೀಡುವುದು<br>-ಎರಡು ಅಥವಾ ಹೆಚ್ಚು ವಸ್ತುಗಳು ಭೌತಿಕವಾಗಿ ಸೇರಿ ಯಾವುದೇ ಬದಲಾವಣೆಯಾಗದೆ ತಮ್ಮ ಮೂಲಗಳನ್ನು ಉಳಿಸಿಕೊಂಡರೆ ಅವುಗಳನ್ನು ಮಿಶ್ರಣ ಎಂದು ತಿಳಿಸಿ ಉದಾಹರಣೆಗಳನ್ನು ನೀಡುವುದು | ಕಬ್ಬಿಣ, ಚಿನ್ನ, ಬೆಳ್ಳಿ, ತಾಮ್ರ, ಇಂಗಾಲ,<br>ಉಪ್ಪು, ನೀರು, ಸಕ್ಕರೆ,<br>ಮಡ್ಡಿ ಮಿಶ್ರಣ, ಅಕ್ಕಿ, ಜೋಳ, | ತಂತ್ರ: ಚಟುವಟಿಕೆ ಸಾಧನ: ಗೃಹಪಾಠ<br>ತಂತ್ರ; ಚಟುವಟಿಕೆ ಸಾಧನ: ಉದಾಹರಣೆಗಳು | ಧಾತುಗಳನ್ನು ಗುರುತಿಸುವರು<br>ಮಿಶ್ರಣಗಳನ್ನು ತಿಳಿಯುವರು | |
| **ವಿಷಯದ ವಿಸ್ತರಣೆ (Expand)** | ವಿದ್ಯಾರ್ಥಿಗಳಿಗೆ ಗುಂಪಿನಲ್ಲಿ ಸಂಯುಕ್ತ ಮತ್ತು ಮಿಶ್ರಣಗಳು ನಡುವಿನ ವ್ಯತ್ಯಾಸಗಳನ್ನು ಪಟ್ಟಿ ಮಾಡಿಸುವುದು. | ಕೋಷ್ಟಕ | ತಂತ್ರ; ಚಟುವಟಿಕೆ ಸಾಧನ: ಕೋಷ್ಟಕ ರಚನೆ | ಉತ್ತಮ ಕೋಷ್ಟ ತಯಾರಿಸುವರು | |
| **ಮೌಲ್ಯಮಾಪನ (Evaluation)** | ವಿದ್ಯಾರ್ಥಿಗಳ ಕಲಿಕೆಯನ್ನು ಪರೀಕ್ಷಿಸಲು ರಸಪ್ರಶ್ನೆ ಕಾರ್ಯಕ್ರಮ ನಡೆಸುವುದು | ಪ್ರಶ್ನಾವಳಿ ಕಾರ್ಡ್ | ತಂತ್ರ: ಪರೀಕ್ಷಣ ಸಾಧನ: ರಸಪ್ರಶ್ನೆಗಳು | ಪ್ರಶ್ನೆಗಳಿಗೆ ಸೂಕ್ತ ಉತ್ತರ ನೀಡುವರು | |

ಶಿಕ್ಷಕರ ಸಹಿ ಮುಖ್ಯ ಶಿಕ್ಷಕರ ಸಹಿ

ಘಟಕ: 13 ಘಟಕದ ಹೆಸರು: **ವಿಸ್ಮಯ ಶಕ್ತಿ.** ದಿನಾಂಕ: ರಿಂದ ವರೆಗೆ

**ನಿರ್ದಿಷ್ಟ ಉದ್ದೇಶಗಳು** : 1) ಕೆಲಸ ಮಾಡಲು ಶಕ್ತಿ ಬೇಕು ಎಂದು ತಿಳಿಯುವರು. 2) ಶಕ್ತಿಯ ವಿವಿಧ ರೂಪಗಳನ್ನು ಗುರುತಿಸುವರು. 3) ಶಕ್ತಿ ಸಂರಕ್ಷಣೆಯ ಮಹತ್ವವನ್ನು ತಿಳಿಯುವರು.

| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ – ತಂತ್ರಗಳು | ಶಿಕ್ಷಕರ ಸ್ವ-ಅವಲೋಕನ | ಅವಧಿ |
|---|---|---|---|---|---|
| **ತೊಡಗಿಸಿಕೊಳ್ಳುವಿಕೆ (Engage)** | ನಿತ್ಯ ಜೀವನದಲ್ಲಿ ಶಕ್ತಿಯ ಅವಶ್ಯಕತೆಯ ಬಗ್ಗೆ ತಿಳಿಸಿ, ವಿದ್ಯಾರ್ಥಿಗಳಿಗೆ 'ಶಕ್ತಿ ಬೇಕು ಶಕ್ತಿ, ಏಕೆ ಬೇಕು ಶಕ್ತಿ' ಎಂಬ ಆಟ ಆಡಿಸುವುದು. | ಆಟ | ತಂತ್ರ: ಚಟುವಟಿಕೆ<br>ಸಾಧನ: ಆಟ | ಆಟದಲ್ಲಿ ಆಸಕ್ತಿಯಿಂದ ಭಾಗವಹಿಸುವರು | |
| **ಪತ್ತೆ ಹಚ್ಚುವಿಕೆ (Explore)** | ವಿದ್ಯಾರ್ಥಿಗಳಿಗೆ ಅವರು ದಿನನಿತ್ಯ ಮಾಡುವ ಯಾವುದಾದರೂ ಐದು ಕೆಲಸಗಳನ್ನು ಪಟ್ಟಿ ಮಾಡಲು ತಿಳಿಸುವುದು. | ಕಪ್ಪುಹಲಗೆ | ತಂತ್ರ: ಚಟುವಟಿಕೆ<br>ಸಾಧನ: ಪಟ್ಟಿ ರಚನೆ | ಕೆಲಸದ ಅರ್ಥವನ್ನು ತಿಳಿಯುವರು | |
| **ವಿವರಣೆ / ವ್ಯಕ್ತಪಡಿಸುವಿಕೆ (Explain / Express)** | -ನಾವು ನಿತ್ಯ ಮಾಡುವ ಚಟುವಟಿಕೆಗಳೇ ಕೆಲಸ ಎಂಬುದನ್ನು ತಿಳಿಸುತ್ತಾ ಕೆಲಸ ಮಾಡಲು ಶಕ್ತಿ ಬೇಕು ಎಂಬುದನ್ನು ವಿವರಿಸುವುದು.<br>-ಶಕ್ತಿಯ ರೂಪಗಳಾದ ಸ್ನಾಯು ಶಕ್ತಿ, ಯಾಂತ್ರಿಕ ಶಕ್ತಿ, ಉಷ್ಣ ಶಕ್ತಿಗಳನ್ನು ವಿವರಿಸಿ, ಅವುಗಳ ಉಪಯೋಗಗಳನ್ನು ತಿಳಿಯುವುದು, & ಉಷ್ಣ ಶಕ್ತಿಯಿಂದ ಮಾಡುವ ಕೆಲಸಗಳನ್ನು ಬರೆಯಲು ತಿಳಿಸುವುದು.<br>-ಸೌರಶಕ್ತಿ, ಪವನ ಶಕ್ತಿ, ಹಾಗೂ ಜಲ ಸಂಗ್ರಹಿತ ಶಕ್ತಿಗಳನ್ನು ಗುರುತಿಸಿ, ಅವುಗಳ ಉಪಯೋಗಗಳನ್ನು ತಿಳಿಸುವುದು. ರಟ್ಟಿನಿಂದ ಗಾಳಿ ಚಕ್ರದ ಮಾದರಿ ತಯಾರಿಸಲು ಹೇಳುವುದು.<br>-ವಿದ್ಯುತ್ ಶಕ್ತಿ ಇಂಧನ ಶಕ್ತಿಗಳನ್ನು ತಿಳಿದು, ವಿವಿಧ ಇಂಧನಗಳು ಹಾಗೂ ಅವುಗಳ ಉಪಯೋಗಗಳನ್ನು ತಿಳಿಸುವುದು. | ಚಿತ್ರಪಟ<br>ಬಟ್ಟೆ ಒಗೆಯುವ ಚಿತ್ರ<br>ಅಡುಗೆ ಮಾಡುವ ಚಿತ್ರ<br>ಗಾಳಿ, ಚಕ್ರ, ಬಲ್ಬ್,<br>ಇಸ್ತ್ರಿ ಪೆಟ್ಟಿಗೆ.<br>ಬೈಕ್ ಚಿತ್ರ | ತಂತ್ರ: ಚಟುವಟಿಕೆ<br>ಸಾಧನ:ಬರವಣಿಗೆ<br><br>ತಂತ್ರ: ಚಟುವಟಿಕೆ<br>ಸಾಧನ: ಮಾದರಿ ತಯಾರಿಕೆ | ಸ್ನಾಯು ಶಕ್ತಿಯನ್ನು ಗುರುತಿಸುವರು<br><br>ಪವನ ಶಕ್ತಿಯ ಉಪಯೋಗವನ್ನು ತಿಳಿಯುವರು | |
| **ವಿಷಯದ ವಿಸ್ತರಣೆ (Expand)** | ಇಂಧನ ಉಳಿತಾಯದ ಪ್ರಾಮುಖ್ಯತೆಯನ್ನು ತಿಳಿಸಿ, ಶಕ್ತಿ ಉಳಿತಾಯದ ವಿವಿಧ ವಿಧಾನಗಳನ್ನು ಪಟ್ಟಿ ಮಾಡಲು ತಿಳಿಸುವುದು. | ಚಟುವಟಿಕೆ | ತಂತ್ರ: ಚಟುವಟಿಕೆ<br>ಸಾಧನ: ಪಟ್ಟಿ ರಚನೆ | ಶಕ್ತಿ ಸಂರಕ್ಷಣೆಯನ್ನು ತಿಳಿಯುವರು | |
| **ಮೌಲ್ಯಮಾಪನ (Evaluation)** | ಚಿಕ್ಕ ಚಿಕ್ಕ ಪ್ರಶ್ನೆಗಳ ಮೂಲಕ ಮಕ್ಕಳ ಕಲಿಕೆಯನ್ನು ಪರೀಕ್ಷಿಸುವುದು.<br>1) ಕೆಲಸ ಮಾಡಲು ಏನು ಬೇಕು? 2) ಶಕ್ತಿಯ ರೂಪಗಳು ಯಾವುವು? | ಪ್ರಶ್ನಾವಳಿ ಕಾರ್ಡ್ | ತಂತ್ರ: ಪರೀಕ್ಷಣ<br>ಸಾಧನ: ಮೌಖಿಕ ಪ್ರಶ್ನೆ | ಪ್ರಶ್ನೆಗಳಿಗೆ ಸೂಕ್ತ ಉತ್ತರ ನೀಡುವರು | |

ಶಿಕ್ಷಕರ ಸಹಿ ಮುಖ್ಯ ಶಿಕ್ಷಕರ ಸಹಿ

ಘಟಕ: 14 ಘಟಕದ ಹೆಸರು: **ಬಾನಂಗಳ.** ದಿನಾಂಕ: ರಿಂದ ವರೆಗೆ

**ನಿರ್ಧಿಷ್ಟ ಉದ್ದೇಶಗಳು** : 1) ಸೌರವ್ಯೂಹವನ್ನು ಪರಿಚಯಿಸುವುದು. 2) ಭೂಮಿಯ ಆಕಾರ, ಗಾತ್ರ ಮತ್ತು ಚಲನೆಗಳನ್ನು ಗುರುತಿಸುವುದು. 3) ಚಂದ್ರನ ಚಲನೆ ಮತ್ತು ಕಲೆಗಳ ಬಗ್ಗೆ ತಿಳಿಸುವುದು.

| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ – ತಂತ್ರಗಳು | ಶಿಕ್ಷಕರ ಸ್ವ-ಅವಲೋಕನ | ಅವಧಿ |
|---|---|---|---|---|---|
| **ತೊಡಗಿಸಿಕೊಳ್ಳುವಿಕೆ (Engage)** | ಚಿಕ್ಕಚಿಕ್ಕ ಪ್ರಶ್ನೆಗಳ ಮೂಲಕ ವಿದ್ಯಾರ್ಥಿಗಳ ಪೂರ್ವ ಜ್ಞಾನವನ್ನು ಪರೀಕ್ಷಿಸುವುದು. 1) ನಮಗೆ ಬೆಳಕು ಯಾವುದರಿಂದ ಸಿಗುವುದು? 2) ರಾತ್ರಿ ಆಕಾಶದಲ್ಲಿ ಏನು ಕಾಣುವುದು? | ಪ್ರಶ್ನಾವಳಿ ಕಾರ್ಡ್ | ತಂತ್ರ: ಪರೀಕ್ಷಣ ಸಾಧನ: ಮೌಖಿಕ ಪರೀಕ್ಷೆ | ಮೌಖಿಕ ಪ್ರಶ್ನೆಗಳಿಗೆ ಸೂಕ್ತವಾಗಿ ಉತ್ತರಿಸುವರು | |
| **ಪತ್ತೆ ಹಚ್ಚುವಿಕೆ (Explore)** | ವಿದ್ಯಾರ್ಥಿಗಳ ಗುಂಪಿಗೆ ಆಕಾಶದಲ್ಲಿ ಕಾಣುವ ವಿವಿಧ ಆಕಾಶ ಕಾಯಗಳನ್ನು ಪಟ್ಟಿ ಮಾಡಲು ತಿಳಿಸುವುದು. | ಆಕಾಶದ ಚಿತ್ರ | ತಂತ್ರ: ಚಟುವಟಿಕೆ ಸಾಧನ: ಪಟ್ಟಿ ರಚನೆ | ಆಕಾಶಕಾಯಗಳನ್ನು ಗುರುತಿಸುವರು | |
| **ವಿವರಣೆ / ವ್ಯಕ್ತಪಡಿಸುವಿಕೆ (Explain / Express)** | ಸೂರ್ಯನ ಪರಿವಾರವನ್ನು ಸೌರವ್ಯೂಹ ಎಂದು ತಿಳಿಸಿ, ಸೌರವ್ಯೂಹದಲ್ಲಿರುವ ಎಂಟು ಗ್ರಹಗಳು ಮತ್ತು ಉಪಗ್ರಹಗಳು ಕ್ಷುದ್ರಗ್ರಹಗಳು, ಉಲ್ಕೆಗಳು, ಧೂಮಕೇತುಗಳನ್ನು ವಿವರಿಸುವುದು. ಹಾಗೂ ಸೌರವ್ಯೂಹದ ಗ್ರಗಳನ್ನು ಬರೆದುಕೊಂಡು ಬರಲು ಹೇಳುವುದು. ಜೀವಿಗಳಿರುವ ಸೌರವ್ಯೂಹದ ಏಕೈಕ ಗ್ರಹವಾದ ಭೂಮಿಯ ಬಗ್ಗೆ ತಿಳಿಸುತ್ತಾ, ಭೂಮಿಯ ಆಕಾರ, ಗಾತ್ರ ಮತ್ತು ಭೂಮಿಯ ಚಲನೆಯ ಬಗ್ಗೆ ವಿವರಿಸುವುದು. ಮತ್ತು ಭೂಮಿಯ ಬಗ್ಗೆ ಟಿಪ್ಪಣಿ ಬರೆಯಲು ತಿಳಿಸುವುದು. ಸೌರವ್ಯೂಹದ ವಿವಿಧ ಗ್ರಹಗಳು ಹಾಗೂ ಅವುಗಳ ಲಕ್ಷಣಗಳನ್ನು ತಿಳಿಯುವುದು ಸೌರವ್ಯೂಹದ ಉಲ್ಕೆಗಳು ಕ್ಷುದ್ರಗ್ರಹಗಳು ಹಾಗೂ ಧೂಮಕೇತುಗಳ ಲಕ್ಷಣಗಳ ಬಗ್ಗೆ ವಿವರಿಸುವುದು. ಭೂಮಿಯ ಏಕೈಕ ಉಪಗ್ರಹವಾದ ಚಂದ್ರನ ಆಕಾರ, ಗಾತ್ರದ ರಚನೆಗಳನ್ನು ತಿಳಿಸುವುದು. | ಸೌರವ್ಯೂಹದ ಚಿತ್ರ<br>ಗ್ಲೋಬ್<br>ಚಂದ್ರನ ಚಿತ್ರ | ತಂತ್ರ: ಚಟುವಟಿಕೆ ಸಾಧನ: ಗೃಹಪಾಠ<br>ತಂತ್ರ: ಬರವಣಿಗೆ ಸಾಧನ: ಟಿಪ್ಪಣಿ ಬರಹ<br>ತಂತ್ರ: ಚಟುವಟಿಕೆ ಸಾಧನ: ಚಾರ್ಟ್ ತಯಾರಿಕೆ | ಸೌರವ್ಯೂಹದ ಬಗ್ಗೆ ತಿಳಿಯುವರು<br>ಭೂಮಿಯ ಚಲನೆಯ ಬಗ್ಗೆ ತಿಳಿಯುವರು<br>ಚಾರ್ಟ್ ತಯಾರಿಕೆಯಲ್ಲಿ ಆಸಕ್ತಿ ತೋರುವರು | |
| **ವಿಷಯದ ವಿಸ್ತರಣೆ (Expand)** | ಕ್ಯಾಂಡಲ್ ಹಾಗೂ ಎರಡು ಚಂಡುಗಳ ಸಹಾಯದಿಂದ ಒಂದರ ನೆರಳು ಇನ್ನೊಂದರ ಮೇಲೆ ಬೀಳುವುದನ್ನು ತೋರಿಸುವುದು. | ಕ್ಯಾಂಡಲ್ ಚಂಡುಗಳು | ತಂತ್ರ: ಚಟುವಟಿಕೆ ಸಾಧನ: ಪ್ರಾತ್ಯಕ್ಷಿಕೆ | ಗ್ರಹಣಗಳನ್ನು ತಿಳಿಯುವರು | |
| **ಮೌಲ್ಯಮಾಪನ (Evaluation)** | ರಸಪ್ರಶ್ನೆ ನಡೆಸುವ ಮೂಲಕ ವಿದ್ಯಾರ್ಥಿಗಳ ಕಲಿಕೆಯನ್ನು ಪರೀಕ್ಷಿಸುವುದು | ಪ್ರಶ್ನಾವಳಿ ಕಾರ್ಡ್ | ತಂತ್ರ: ಪರೀಕ್ಷಣ ಸಾಧನ: ರಸಪ್ರಶ್ನೆ | ಸೂಕ್ತ ಉತ್ತರವನ್ನು ನೀಡುವರು | |

ಶಿಕ್ಷಕರ ಸಹಿ ಮುಖ್ಯ ಶಿಕ್ಷಕರ ಸಹಿ

ಘಟಕ: 15 ಘಟಕದ ಹೆಸರು: **ನಮ್ಮ ಭಾರತ – ಪ್ರಾಕೃತಿಕ ವೈವಿಧ್ಯ.** ದಿನಾಂಕ: ರಿಂದ ವರೆಗೆ

**ನಿರ್ಧಿಷ್ಟ ಉದ್ದೇಶಗಳು** : 1) ಭಾರತದ ಪ್ರಾಕೃತಿಕ ವಿಭಾಗಗಳ ಪರಿಚಯ. 2) ಭಾರತದ ಹವಾಗುಣ, ವಾಯುಗುಣವನ್ನು ತಿಳಿಯುವುದು. 3) ಭಾರತದ ಸಸ್ಯ ಮತ್ತು ಪ್ರಾಣಿ ವರ್ಗಗಳ ಬಗ್ಗೆ ತಿಳಿಯುವುದು.

| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ – ತಂತ್ರಗಳು | ಶಿಕ್ಷಕರ ಸ್ವ-ಅವಲೋಕನ | ಅವಧಿ |
|---|---|---|---|---|---|
| **ತೊಡಗಿಸಿಕೊಳ್ಳುವಿಕೆ (Engage)** | ಪ್ರಶ್ನೆಗಳ ಮೂಲಕ ವಿದ್ಯಾರ್ಥಿಗಳ ಪೂರ್ವಜ್ಞಾನ ವನ್ನು ಪರೀಕ್ಷಿಸುವುದು. 1) ನಿನ್ನ ದೇಶ ಯಾವುದು? 2) ನಿನ್ನ ರಾಜ್ಯ ಯಾವುದು? 3) ನಿನ್ನ ಭಾಷೆ ಯಾವುದು? | ಪ್ರಶ್ನಾವಳಿ ಕಾರ್ಡ್ | ತಂತ್ರ: ಪರೀಕ್ಷಣಾ<br>ಸಾಧನ: ಮೌಖಿಕ ಪ್ರಶ್ನೆ | ಪ್ರಶ್ನೆಗಳಿಗೆ ಸರಿಯಾದ ಉತ್ತರ ನೀಡುವರು | |
| **ಪತ್ತೆ ಹಚ್ಚುವಿಕೆ (Explore)** | ವಿದ್ಯಾರ್ಥಿಗಳಿಗೆ ಗುಂಪುಗಳಲ್ಲಿ ಚರ್ಚಿಸಿ ತಮ್ಮ ಸುತ್ತಮುತ್ತಲಿರುವ ಪರ್ವತಗಳು ಅರಣ್ಯಗಳು ಪ್ರಾಣಿಗಳನ್ನು ಪಟ್ಟಿಮಾಡಲು ತಿಳಿಸುವುದು | ಕಾಡಿನ ಚಿತ್ರ | ತಂತ್ರ: ಚಟುವಟಿಕೆ<br>ಸಾಧನ: ಪಟ್ಟಿ ಮಾಡುವುದು | ಆಸಕ್ತಿಯಿಂದ ಚಟುವಟಿಕೆಯಲ್ಲಿ ಭಾಗವಹಿಸುವರು | |
| **ವಿವರಣೆ / ವ್ಯಕ್ತಪಡಿಸುವಿಕೆ (Explain / Express)** | ಭಾರತದ ಭೂಪಟವನ್ನು ತೋರಿಸಿ, ಪ್ರಾಕೃತಿಕ ವಿಭಾಗಗಳು ಹಾಗೂ ಉತ್ತರ ಭಾರತದ ಪರ್ವತಗಳ ಗುಣಲಕ್ಷಣಗಳನ್ನು ವಿವರಿಸುವುದು.<br>ಉತ್ತರ ಭಾರತದ ಗಂಗಾನದಿ ಬಯಲು ಪ್ರದೇಶದ ಫಲವತ್ತತೆ, ಬೆಳೆಗಳು ಅಲ್ಲಿನ ಜನರ ಆಚಾರ ವಿಚಾರಗಳನ್ನು ವಿವರಿಸುವುದು.<br>ಪರ್ಯಾಯ ಪ್ರಸ್ಥಭೂಮಿಯ ಪ್ರಮುಖ ಲಕ್ಷಣಗಳು ಅನುಕೂಲಗಳನ್ನು ಗುರುತಿಸುವುದು.<br>ಭಾರತದ ಪೂರ್ವ ಹಾಗೂ ಪಶ್ಚಿಮ ಕರಾವಳಿ ಪ್ರದೇಶಗಳು ಹಾಗೂ ಅವುಗಳ ಪ್ರಮುಖ ಲಕ್ಷಣಗಳನ್ನು ತಿಳಿಸುವುದು. ಕರ್ನಾಟಕದ ಕರಾವಳಿ ನಗರಗಳನ್ನು ಪಟ್ಟಿ ಮಾಡಲು ತಿಳಿಸುವುದು. | ಭಾರತದ ನಕ್ಷೆ<br>ನದಿಯ ನಕ್ಷೆ<br>ಕರ್ನಾಟಕದ ನಕ್ಷೆ | ತಂತ್ರ: ವಿವರಣೆ<br>ಸಾಧನ: ಪ್ರಾತ್ಯಕ್ಷಿಕೆ<br>ತಂತ್ರ: ಚಟುವಟಿಕೆ<br>ಸಾಧನ: ಪಟ್ಟಿ ಮಾಡುವುದು | ಪ್ರಾಕೃತಿಕ ವಿಭಾಗಗಳನ್ನು ತಿಳಿಯುವರು<br>ಉತ್ತರದ ಮೈದಾನ ಗಳನ್ನು ಗುರುತಿಸುವರು<br>ಕರಾವಳಿಯ ಬಗ್ಗೆ ತಿಳಿಯುವರು | |
| **ವಿಷಯದ ವಿಸ್ತರಣೆ (Expand)** | ಭಾರತದ ನಕ್ಷೆಯಲ್ಲಿ ಮರುಭೂಮಿಯನ್ನು ಗುರುತಿಸಿ, ಅದರ ಲಕ್ಷಣಗಳನ್ನು ಹೇಳಲು ತಿಳಿಸುವುದು. | ಮರುಭೂಮಿಯ ಚಿತ್ರ | ತಂತ್ರ: ಚಟುವಟಿಕೆ<br>ಸಾಧನ: ನಕ್ಷೆ ಗುರುತಿಸುವುದು | ನಕ್ಷೆಯಲ್ಲಿ ಸ್ಥಳ ಗುರುತಿಸುವ ಕೌಶಲ ಹೊಂದಿರುವರು | |
| **ಮೌಲ್ಯಮಾಪನ (Evaluation)** | ಭಾರತದ ನಕ್ಷೆಯನ್ನು ಬಿಡಿಸಲು ತಿಳಿಸುವುದು. | ಪಠ್ಯಪುಸ್ತಕ ಅಭ್ಯಾಸ ಪುಸ್ತಕ | ತಂತ್ರ: ಚಟುವಟಿಕೆ<br>ಸಾಧನ: ನಕ್ಷೆ ರಚನೆ | ಉತ್ತಮವಾಗಿ ನಕ್ಷೆಯನ್ನು ಬಿಡಿಸುವರು | |

ಶಿಕ್ಷಕರ ಸಹಿ ಮುಖ್ಯ ಶಿಕ್ಷಕರ ಸಹಿ

ಘಟಕ: 16 ಘಟಕದ ಹೆಸರು: **ನಮ್ಮ ಭಾರತ – ರಾಜಕೀಯ ಮತ್ತು ಸಾಂಸ್ಕೃತಿಕ.** ದಿನಾಂಕ: ರಿಂದ ವರೆಗೆ

**ನಿರ್ಧಿಷ್ಟ ಉದ್ದೇಶಗಳು** : 1) ಭಾರತದ ಭೌಗೋಳಿಕ ಸ್ಥಾನ ಗುರುತಿಸುವುದು.

2) ಭಾರತದ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳನ್ನು ತಿಳಿಯುವುದು.

3) ರಾಷ್ಟ್ರೀಯ ಚಿಹ್ನೆಗಳ ಮಹತ್ವವನ್ನು ತಿಳಿಯುವುದು.

| **ಕಲಿಕೆಯ ಅಂಶಗಳು** | **ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು** | **ಬೋಧನಾ ಕಲಿಕೋಪಕರಣಗಳು** | **ಮೌಲ್ಯಮಾಪನ ಸಾಧನ – ತಂತ್ರಗಳು** | **ಶಿಕ್ಷಕರ ಸ್ವ-ಅವಲೋಕನ** | **ಅವಧಿ** |
|---|---|---|---|---|---|
| **ತೊಡಗಿಸಿಕೊಳ್ಳುವಿಕೆ (Engage)** | ವಿದ್ಯಾರ್ಥಿಗಳಿಗೆ ತನ್ನ ರಾಜ್ಯ ಹಾಗೂ ತನ್ನ ಜಿಲ್ಲೆಯ ಪರಿಚಯ ಮಾಡಿಸಿ, ತನ್ನ ಜಿಲ್ಲೆಯಲ್ಲಿರುವ ತಾಲ್ಲೂಕುಗಳನ್ನು ಬರೆಯಲು ತಿಳಿಸುವುದು. | ರಾಜ್ಯದ ನಕ್ಷೆ | ತಂತ್ರ: ಚಟುವಟಿಕೆ<br>ಸಾಧನ: ಬರವಣಿಗೆ | ತಾಲ್ಲೂಕುಗಳನ್ನು ಗುರುತಿಸಿ ಬರೆಯುವರು | |
| **ಪತ್ತೆ ಹಚ್ಚುವಿಕೆ (Explore)** | ನಮ್ಮ ಜಿಲ್ಲೆಯ ನೆರೆಹೊರೆಯ ಜಿಲ್ಲೆಗಳನ್ನು ಗುರುತಿಸಲು ಹೇಳುವುದು. | ರಾಜ್ಯದ ನಕ್ಷೆ | ತಂತ್ರ: ಚಟುವಟಿಕೆ<br>ಸಾಧನ: ಪಟ್ಟಿ ಮಾಡುವುದು | ಜಿಲ್ಲೆಗಳನ್ನು ಗುರುತಿಸಿ ಪಟ್ಟಿ ಮಾಡುವರು | |
| **ವಿವರಣೆ / ವ್ಯಕ್ತಪಡಿಸುವಿಕೆ (Explain / Express)** | -ಪ್ರಪಂಚದ ನಕ್ಷೆಯಲ್ಲಿ ಭಾರತದ ಸ್ಥಾನ, ಗಾತ್ರ, ವಿಸ್ತೀರ್ಣ, ಲಕ್ಷಣಗಳನ್ನು ತಿಳಿಯುವುದು.<br><br>-ಭಾರತದ ನಕ್ಷೆಯ ಮೂಲಕ ನೆರೆಯ ರಾಷ್ಟ್ರಗಳನ್ನು, ಗಡಿಗಳನ್ನು ಹಾಗೂ ಸಮುದ್ರಗಳನ್ನು ಗುರುತಿಸುವುದು. ನೆರೆಯ ರಾಷ್ಟ್ರಗಳನ್ನು ಹೆಸರಿಸಲು ತಿಳಿಸುವುದು.<br><br>-ಭಾರತವನ್ನು 29 ರಾಜ್ಯಗಳನ್ನಾಗಿ & 7 ಕೇಂದ್ರಾಡಳಿತ ಪ್ರದೇಶಗಳನ್ನು ವಿಭಜಿಸಿರುವುದನ್ನು ತಿಳಿಸುವುದು. ಭಾರತದ ಎಲ್ಲಾ ರಾಜ್ಯಗಳ ಹೆಸರುಗಳನ್ನು ಪಟ್ಟಿ ಮಾಡಲು ತಿಳಿಸುವುದು.<br><br>-ಭಾರತದಲ್ಲಿ ನೆಲೆಸಿರುವ ಹಿಂದೂ, ಮುಸ್ಲಿಂ, ಕ್ರೈಸ್ತ, ಸಿಖ್, ಜೈನ, | ಪ್ರಪಂಚದ ನಕ್ಷೆ<br><br>ಭಾರತದ ನಕ್ಷೆ | ತಂತ್ರ: ಚಟುವಟಿಕೆ<br>ಸಾಧನ: ಗೃಹಪಾಠ | ನೆರೆಯ ರಾಷ್ಟ್ರಗಳನ್ನು ತಿಳಿಯುವರು<br><br>ರಾಜ್ಯಗಳನ್ನು ಗುರುತಿಸುವರು<br><br>ವಿವಿಧ ಧರ್ಮಗಳನ್ನು | |

| | | | | | |
|---|---|---|---|---|---|
| | ಮುಂತಾದ ಧರ್ಮದವರ ಹಾಗೂ ಅವರ ಆಚರಣೆಗಳ ಬಗ್ಗೆ ವಿವರಿಸುವುದು. ಹಾಗೂ ವಿವಿಧ ಧರ್ಮದ ಆಚರಣೆಯ ಚಿತ್ರ ಸಂಗ್ರಹಿಸಲು ತಿಳಿಸುವುದು.<br><br>-ಭಾರತದ ರಾಷ್ಟ್ರೀಯ ಚಿಹ್ನೆಗಳಾದ ರಾಷ್ಟ್ರಧ್ವಜ, ರಾಷ್ಟ್ರ ಲಾಂಛನ, ರಾಷ್ಟ್ರೀಯ ಹೂವು, ರಾಷ್ಟ್ರೀಯ ಪ್ರಾಣಿ, ರಾಷ್ಟ್ರೀಯ ಪಕ್ಷಿ, ಮುಂತಾದವುಗಳ ಬಗ್ಗೆ ತಿಳಿಸುವುದು. ಹಾಗೂ ಭಾರತದ ರಾಷ್ಟ್ರೀಯ ಚಿಹ್ನೆಗಳ ಚಿತ್ರ ಸಂಗ್ರಹಿಸಿ ಚಾರ್ಟ್ ತಯಾರಿಸಲು ತಿಳಿಸುವುದು.<br><br>-ನಮ್ಮ ದೇಶದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಸಾಧಕರಿಗೆ ನೀಡುವ ಪದ್ಮಶ್ರೀ, ಪದ್ಮವಿಭೂಷಣ, ಪದ್ಮಭೂಷಣ, ಭಾರತ ರತ್ನ, ಮುಂತಾದ ಪ್ರಶಸ್ತಿಗಳ ಬಗ್ಗೆ ಮತ್ತು ಅವುಗಳನ್ನು ಪಡೆದಿರುವ ವ್ಯಕ್ತಿಗಳ ಬಗ್ಗೆ ತಿಳಿಸುವುದು. | ರಾಷ್ಟ್ರೀಯ ಚಿಹ್ನೆಗಳು | ತಂತ್ರ: ಚಟುವಟಿಕೆ<br>ಸಾಧನ: ಚಾರ್ಟ್ ತಯಾರಿಕೆ<br><br>ತಂತ್ರ: ಚಟುವಟಿಕೆ<br>ಸಾಧನ: ಚಿತ್ರ ಸಂಗ್ರಹ | ತಿಳಿದುಕೊಳ್ಳುವರು<br><br>ವಿವಿಧ ಪ್ರಶಸ್ತಿಗಳನ್ನು ಹಾಗೂ ಪುರಸ್ಕೃತರನ್ನು ತಿಳಿಯುವರು | |
| **ವಿಷಯದ ವಿಸ್ತರಣೆ**<br>**(Expand)** | ಭಾರತದಲ್ಲಿ ವಿವಿಧ ಕ್ರೀಡೆಗಳಲ್ಲಿ ಸಾಧನೆ ಮಾಡಿದ ಆಟಗಾರರನ್ನು ಗುರುತಿಸುವುದು. | ಚಿತ್ರಪಟ | ತಂತ್ರ: ಚಟುವಟಿಕೆ<br>ಸಾಧನ: ಬರಹ | ಆಟಗಾರರನ್ನು ಗುರುತಿಸುವರು | |
| **ಮೌಲ್ಯಮಾಪನ**<br>**(Evaluation)** | ವಿದ್ಯಾರ್ಥಿಗಳು ಕಲಿತ ವಿಷಯವನ್ನು 10 ಅಂಕಗಳ ಲಿಖಿತ ಪರೀಕ್ಷೆಯ ಮೂಲಕ ಪರೀಕ್ಷಿಸುವುದು. | ಪ್ರಶ್ನೆಪತ್ರಿಕೆ | ತಂತ್ರ: ಪರೀಕ್ಷಣ<br>ಸಾಧನ: ಲಿಖಿತ ಪರೀಕ್ಷೆ | ಪರೀಕ್ಷೆಯಲ್ಲಿ ಉತ್ತಮವಾಗಿ ಉತ್ತರಿಸುವರು | |

ಶಿಕ್ಷಕರ ಸಹಿ

ಮುಖ್ಯ ಶಿಕ್ಷಕರ ಸಹಿ

ಆತ್ಮೀಯ ಶಿಕ್ಷಕಮಿತ್ರರೇ ಕೊರೋನಾ ವೈರಸ್ ಹರಡುವುದನ್ನು ತಡೆಗಟ್ಟುವಿಕೆಯ ಪ್ರಯುಕ್ತ ದೇಶಾಧ್ಯಂತ ಲಾಕ್ ಡೌನ್ ಘೋಷಣೆಯಾಗಿರುವ ಪ್ರಯುಕ್ತ, ನಮಗೆ ಇಲಾಖೆ ನೀಡಿರುವ WORK FROM HOME ಸಮಯಾವಕಾಶವನ್ನು ಬಳಸಿಕೊಂಡು ಈ ಪಾಠ ಟಿಪ್ಪಣಿಯ ಡಿ.ಟಿ.ಪಿ. ಕಾರ್ಯ ಮಾಡಿದ್ದು, ಇದನ್ನು ಮಾದರಿಯಾಗಿ ಬಳಸಿಕೊಳ್ಳಬಹುದು. ಹಾಗೂ ಉತ್ತಮ ಸಲಹೆಗಳನ್ನು ನೀಡಬಹುದು.

- * **ಧನ್ಯವಾದಗಳು** * -

**ನಿಜಲಿಂಗಪ್ಪ ಹೆಚ್ ಶಿಕ್ಷಕರು**

**ಹಿರಿಯೂರು, ಚಿತ್ರದುರ್ಗ ಜಿಲ್ಲೆ**

**7026654475**